ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಪುರಸ್ಕೃತ....

# ಸತ್ಯಾಶ್ರಯ

ಸತ್ಯಕ್ಕೆ ಆಶ್ರಯ

ಪ್ರಾದೇಶಿಕ ಕನ್ನಡ ದಿನ ಪತ್ರಿಕೆ

SATYASHRAYA REGIONAL KANNADA DAILY

ಸಂಪಾದಕ: ಆನಂದ ಎಸ್. ಜಿಗಜಿನ್ನಿ BSc.LLB

ಸಂಸ್ಥಾಪಕ ಸಂಪಾದಕರು: ಲಿಂ||ಶರಣಬಸವರಾಜ ಎಸ್. ಜಿಗಜಿನ್ನಿ

ವಿಜಯಪುರ, ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ವಿಜಯನಗರ, ರಾಯಚೂರ, ಯಾದಗಿರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರಿತ.

E-mail: satyashraya@gmail.com | ಸಂಪುಟ : 35 | ಸಂಚಿಕೆ : 322 ಮಂಗಳವಾರ | ದಿನಾಂಕ: 04-03-2025 | ಪುಟ : 08 | KRN IV/36, RNI:50599/93 | 9845167186,

www. satyashrayanews.com | VOLUME : 35 | ISSUE : 322 TUESDAY | Date: 04-03-2025 | PAGE : 08 | PMG KA/NK/362/03-05 | 7019500547

## ಅಗಲಿದ ಗಣ್ಯರಿಗೆ ಉಭಯ ಸದನಗಳಲ್ಲಿ ಸಂತಾಪ ಸೂಚನೆ



ಬೆಂಗಳೂರು– ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್, ಲೋಕಸಭೆ ಮಾಜಿ ಸದಸ್ಯ ಎಂ.ಶ್ರೀನಿವಾಸ್ ಸೇರಿದಂತೆ ಇತ್ತೀಚೆಗೆ ಅಗಲಿದ ಗಣ್ಯರಿಗೆ ವಿಧಾನಸಭೆಯಲ್ಲಿಂದು ಭಾವಪೂರ್ಣ ಸಂತಾಪ ಸೂಚಿಸಲಾಯಿತು.

ಸಂತಾಪ ಸೂಚನ ನಿರ್ಣಯ ಮಂಡಿಸಿದ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಎಂ. ಶ್ರೀನಿವಾಸ್, ಜಯವಾಣಿ ಮಂಚೇಗೌಡ, ಖ್ಯಾತ ಚಿತ್ರನಿರ್ಮಾಪಕ ಶ್ಯಾಮ್ ಬೆನಗಲ್, ಹಿರಿಯ ಸಾಹಿತಿ ಡಿಸೋಜ, ಜನಪದ ಹಾಡುಗಾರ್ತಿ ಸುಕ್ರಿ ಬೊಮ್ಮಗೌಡ ಅವರು ನಿಧನ ಹೊಂದಿರುವುದನ್ನು ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಿದರು.

ಮನಮೋಹನ್ ಸಿಂಗ್ ಅವರು 1932ರ ಸೆಪ್ಟೆಂಬರ್ 26ರಂದು ಅವಿಭಜಿತ ಪಂಜಾಬ್ ಪ್ರಾಂತ್ಯದಲ್ಲಿ ಜನಿಸಿದ್ದರು. ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಹಾನರ್ಸ್ ಪದವಿ, ಆಕ್ಸ್‌ವಿವಿಯಿಂದ ಡಿಫಿಲ್ ಪದವಿಯನ್ನು ಪಡೆದಿದ್ದರು. ಜಿನಿವಾದಲ್ಲಿನ ದಕ್ಷಿಣ ಆಯೋಗಕ್ಕೆ ಮಹಾಪ್ರಧಾನ ಕಾರ್ಯದರ್ಶಿ ಹಾಗೂ ಕಮೀಷನರ್ ಆಗಿ ನೇಮಕಗೊಂಡಿದ್ದರು.

ವಾಣಿಜ್ಯ ಸಚಿವಾಲಯದಲ್ಲಿ ಆರ್ಥಿಕ ಸಲಹೆಗಾರ, ಹಣಕಾಸು ಸಚಿವಾಲಯದ ಮುಖ್ಯ ಆರ್ಥಿಕ ಸಲಹೆಗಾರ, ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಗೌರರ್ ಆಗಿ ಪ್ರಧಾನಮಂತ್ರಿಯ ಸಲಹೆಗಾರರಾಗಿ ಯುಜಿಸಿಯ ಅಧ್ಯಕ್ಷರಾಗಿ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು ಎಂದು ಸ್ಮರಿಸಿದರು.

ಆರು ಬಾರಿ ರಾಜ್ಯಸಭಾ ಸದಸ್ಯರಾಗಿದ್ದ ಅವರು ಕೇಂದ್ರ ಹಣಕಾಸು ಸಚಿವರಾಗಿ ಮಾಡಿದ ಆರ್ಥಿಕ ಸುಧಾರಣೆಗಳು ವಿಶ್ವದ ಮನ್ನಣೆ ಪಡೆದಿವೆ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್, ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಮಾಹಿತಿ ಹಕ್ಕು ಅಧಿನಿಯಮ ಸೇರಿದಂತೆ ಹತ್ತು ಹಲವು ಜನಪ್ರಿಯ ಶಾಸನಗಳು ಹಾಗೂ ಯೋಜನೆಗಳನ್ನು ಜಾರಿಗೆ ತಂದಿದ್ದರು. ಆರ್ಥಿಕ ಸುಧಾರಣೆಯ ಹರಿಕಾರ, ಅರ್ಥ ಕ್ರಾಂತಿಯ ರಾಜನೀತಿಜ್ಞ ಆಗಿದ್ದ ಅವರು ಪದ್ಮವಿಭೂಷಣ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಇವರು 2024ರ ಡಿಸೆಂಬರ್ 26ರಂದು ನಿಧನ ಹೊಂದಿದ್ದಾರೆ ಎಂದು ವಿಷಾದಿಸಿದರು.

ಎಂ.ಶ್ರೀನಿವಾಸ್ ಅವರು ಉತ್ತರಹಳ್ಳಿಯಲ್ಲಿ 1942ರ ಅಕ್ಟೋಬರ್ 30ರಂದು ಜನಿಸಿದ್ದರು. ಕೃಷಿಕರು ಹಾಗೂ ಕೈಗಾರಿಕೋದ್ಯಮಿಯಾಗಿದ್ದ ಅವರು ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಕನಕಪುರ ಕ್ಷೇತ್ರದಿಂದ ಲೋಕಸಭೆಗೂ ಆಯ್ಕೆಯಾಗಿದ್ದರು. 2025 ಜನವರಿ 16ರಂದು ನಿಧನರಾದರು ಎಂದು ಹೇಳಿದರು. ಜಯವಾಣಿ ಮಂಜೇಗೌಡ ಅವರು ಮದ್ದೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿ 7ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ಇವರು ಜ.3ರಂದು ನಿಧನರಾಗಿದ್ದಾರೆ ಎಂದರು.

ಸಿನಿಮಾ ನಿರ್ದೇಶಕ ಶ್ಯಾಮ್ ಬೆನಗಲ್ ಅವರು 1934ರಲ್ಲಿ ಅಂದಿನ ಹೈದರಾಬಾದ್ ಪ್ರಾಂತ್ಯದ ತಿರುಮಲಗಿರಿಯಲ್ಲಿ ಜನಿಸಿದ್ದರು.

## ಹಕ್ಕಿ ಜ್ವರದ ಬಗ್ಗೆ ಆತಂಕ ಬೇಡ | ಜಿಲ್ಲೆಯಲ್ಲಿ ಯಾವುದೇ ಪ್ರಕರಣಗಳು ಇಲ್ಲ

## ಮುಂಜಾಗ್ರತಾ ಕ್ರಮ ಅನುಸರಿಸುವುದು ಅಗತ್ಯ: ಡಿಸಿ ಜಾನಕಿ




ಬಾಗಲಕೋಟೆ– ಜಿಲ್ಲೆಯ ಜನತೆ ಹಕ್ಕಿ ಜ್ವರದ ಬಗ್ಗೆ ಆತಂಕ ಪಡುವುದು ಬೇಡ. ಆದರೆ ಮುಂಜಾಗ್ರತೆ ಕ್ರಮಗಳನ್ನು ಅನುಸರಿಸುವುದು ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಹಕ್ಕಿ ಶೀತ ಜ್ವರ ಹರಡದಂತೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಹಕ್ಕಿ ಜ್ವರ ಅಥವಾ ಕೋಳಿ ಶೀತ ಜ್ವರ ಎಚ್5ಎನ್1 ವೈರಸ್‌ನಿಂದ ಹರಡುವ ಖಾಯಿಲೆಯಾಗಿದ್ದು, ಹಕ್ಕಿಯಿಂದ ಹಕ್ಕಿಗಳಿಗೆ ಹರಡುತ್ತಿದ್ದು, ಕೆಲವೊಮ್ಮೆ ರೋಗ ಪೀಡಿತ ಹಕ್ಕಿಗಳ ಸಂಪರ್ಕದಿಂದ ಮನುಷ್ಯರಲ್ಲೂ ಈ ಜ್ವರದ ಲಕ್ಷಣಗಳು ಕಂಡು ಬರುವ ಸಾದ್ಯತೆ ಇದೆ ಎಂದರು.

ರಾಜ್ಯದ ಚಿಕ್ಕಬಳ್ಳಾಪೂರ, ಬಳ್ಳಾರಿ ಜಿಲ್ಲೆಗಳಲ್ಲಿ ಹಕ್ಕಿ ಜ್ವರದ ಪ್ರಕರಣಗಳು ಕಂಡುಬಂದಿವೆ. ಆದರೆ ಜಿಲ್ಲೆಯಲ್ಲಿ ಯಾವುದೇ ಪ್ರಕರಣಗಳು ಕಳೆದ 10 ವರ್ಷಗಳಲ್ಲಿ ಕಂಡುಬಂದಿಲ್ಲವಾದರೂ ಮುಂಜಾಗ್ರತಾ ಕ್ರಮ ಅನುಸರಿಸುವುದು ಅಗತ್ಯವಾಗಿದೆ. ಜಿಲ್ಲೆಯಲ್ಲಿ ಹಕ್ಕಿ ಜ್ವರ ಹರಡಂತೆ ಮುಂಜಾಗ್ರತವಾಗಿ 28 ಕಾರ್ಯಪಡೆಗಳನ್ನು ರಚಿಸಲಾಗಿದ್ದು, ಕಾರ್ಯಪಡೆ ದಿನಂಪ್ರತಿ ಕೋಳಿ ಫಾರ್ಮಗಳಿಗೆ ಭೇಟಿ ನೀಡಿ ಪರಿಶೀಲಿಸಲು ಸೂಚಿಸಿದರು.

ಪಶು ಇಲಾಖೆಯ ಉಪ ನಿರ್ದೇಶಕ ಎಸ್.ಎಚ್. ಕರಡಿಗುಡ್ಡ ಮಾತನಾಡಿ ಜಿಲ್ಲೆಯಲ್ಲಿ ಮಾಂಸದ ಫಾರ್ಮ 348 ಇದ್ದು, ಮೊಟ್ಟೆ ಕೋಳಿ ಫಾರ್ಮ 69 ಇವೆ. ಜಿಲ್ಲೆಯಲ್ಲಿ ರಚಿಸಲಾದ ಪ್ರತಿಯೊಂದು ಕಾರ್ಯಪಡೆ ಫಾರ್ಮಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತಿದ್ದಾರೆ. ಯಾವುದೇ ಪ್ರಕರಣಗಳು ಕಂಡುಬಂದಿರುವದಿಲ್ಲ. ಆದರು ಸಹ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಪಶು ಸಹಾಯವಾಣಿ 1962 ಸಂಖ್ಯೆಗೆ ಕರೆ ಸಹ ಮಾಡಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಡಿ. ಮಾತನಾಡಿ ರೋಗ ಪೀಡಿತ ಕೋಳಿ ಅಥವಾ ಹಕ್ಕಗಳ ಮಾಂಸವನ್ನು ಸರಿಯಾಗಿ ಬೇಯಿಸದೇ ತಿನ್ನುವದರಿಂದ, ಸೋಂಕಿರುವ ಹಸಿ ಮೊಟ್ಟೆ ಸೇವನೆ ಮಾಡುವುದರಿಂದ ಹಾಗೂ ಕೋಳಿಗಳ ಹಿಕ್ಕೆಗಳು ಮನುಷ್ಯರು ಕುಡಿಯುವ ನೀರಿನೊಂದಿಗೆ ಬೆರೆತು ಕಲುಷಿತಗೊಂಡಾಗ ಈ ಖಾಯಿಲೆ ಹರಡುತ್ತದೆ. ಕೆಲವು ಸಂದರ್ಭಗಳಲ್ಲಿ ಗಾಳಿಯ ಮೂಲಕವೂ ಮನುಷ್ಯರಿಗೆ ಹರಡುವ ಸಾದ್ಯವೆ ಇರುತ್ತದೆ. ಹೆಲ್ಪಲೈನ್ 1962

ಸಾಮಾನ್ಯವಾಗಿ ಹಕ್ಕಿ ಜ್ವರ ಜ್ವರದ ಲಕ್ಷಣಗಳಂತೆಯೇ ಇರುತ್ತದೆ. ಜ್ವರ ಮತ್ತು ಕೆಮ್ಮು, ಶೀತ, ಕಲೆನೋವು, ಗಂಟಲು ಕೆರೆತ, ನೆಗಡಿ, ಸ್ನಾಯುಗಳಲ್ಲಿ ನೋವು, ಆಯಾಸ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ವಾಂತಿ ಮತ್ತು ಭೇದಿಯೂ ಆಗಬಹುದು. ಇಂತಹ ಲಕ್ಷಣಗಳು ಕಂಡುಬಂದಾಗ ಸಮೀಪದ ಸರಕಾರಿ ಆಸ್ಪತ್ರೆ ಇಲ್ಲವೇ ಜಿಲ್ಲಾ ನೋಡಲ್ ಅಧಿಕಾರಿ ಡಾ.ವೆಂಕಟೇಶ ಸಂಕ್ರಿ (9448928662), ಹೆಲ್ಪಲೈನ್ ನಂ.104ಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ದಯಾನಂದ ಕರೆಣ್ಣವರ, ಪಶುವೈದ್ಯಾಧಿಕಾರಿ ಪದರಾ ಸೇರಿದಂತೆ ಆಯಾ ತಾಲೂಕಿನ ಪಶು ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

## ಪಠ್ಯೇತರ ಚಟುವಟಿಕೆಗೆ ಆದ್ಯತೆ ನೀಡಿ: ಖಲೀಲ ಕೊತ್ತಲ



ಗುಳೇದಗುಡ್ಡ– ವಿದ್ಯಾರ್ಥಿಗಳು ಓದಿನಲ್ಲಿ ಶ್ರದ್ಧೆ, ಆಸಕ್ತಿ ಹೊಂದುವುದರ ಜತೆಗೆ ಶಿಕ್ಷಕರು ಹಾಗೂ ಪಾಲಕರ ಬಗ್ಗೆ ಗೌರವ ಭಾವನೆ ಬೆಳೆಸಿಕೊಳ್ಳಬೇಕು ಎಂದು ಎಸ್‌ಡಿಎಂಸಿ ಅಧ್ಯಕ್ಷ ಖಲೀಲ ಕೊತ್ತಲ ಹೇಳಿದರು.

ಪಟ್ಟಣದ ಸರ್ಕಾರಿ ಉರ್ದು ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಆಯೋಜಿಸಿದ್ದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ 7ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣ ಪಡೆಯದೆ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಓದಿನ ಜತೆಗೆ ಪಠ್ಯೇತರ ಚಟುವಟಿಕೆಗೂ ಆದ್ಯತೆ ನೀಡಬೇಕು. ಸರ್ಕಾರ ಉರ್ದು ಶಾಲೆಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸಬೇಕು ಎಂದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಕೆ.ಆರ್. ರಾಯಚೂರ, ಬಡಿಮಸೀದಿ ಚೇರ್ಮನ್ ಎಂ.ಎಂ ಮಕಾನ್‌ದಾರ ಮಾತನಾಡಿದರು.

ಎಂ.ಎನ್. ಹಣಗಿ, ರಾಜಮಹ್ಮದ ಕುದರಿ, ಮೌಲಾನಾ ಸೈಯದ್ ಅಖ್ತರ, ಮುಖ್ಯ ಶಿಕ್ಷಕ ಸೈಯದ್ ಮಕಾನ್‌ದಾರ, ಶಿಕ್ಷಕರಾದ ಸುರೇಶ ಬಾಟ್, ಅಬೂಬಕರ ಮಕಾನದಾರ, ರಜಾನಾ ಕಲೇಗಾರ, ನಾಶೀರಾ ಕೊತ್ತಲ, ನಾಶೀರಾ ಹುಲ್ಲಿಕೇರಿ, ರಮೀಜಾ ರಾಮದುರ್ಗ ಮತ್ತಿತರರಿದ್ದರು.

## ಜಮಖಂಡಿಯನ್ನು ಜಿಲ್ಲೆಯಾಗಿ ಘೋಷಿಸಿ



ಜಮಖಂಡಿ– ಪ್ರಸಕ್ತ ಸಾಲಿನ ಬಜೆಟ್ ಅಧಿವೇಶನದಲ್ಲಿ ಜಮಖಂಡಿಯನ್ನು ಜಿಲ್ಲೆಯಾಗಿ ಘೋಷಣೆ ಮಾಡಬೇಕು ಎಂದು ಜಮಖಂಡಿ ಜಿಲ್ಲಾ ಹೋರಾಟ ಸಮಿತಿ ಮುಖಂಡ ಉಮೇಶ ಆಲಮೇಲಕರ ಒತ್ತಾಯಿಸಿದರು.

ನಗರದ ರಮಾ ನಿವಾಸದಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೊಷ್ಠಿಯಲ್ಲಿ ಮಾತನಾಡಿದ ಅವರು, ದೇಶ ಗಣರಾಜ್ಯವಾಗುವ ಸಂದರ್ಭದಲ್ಲಿ ಪಟವರ್ಧನ ಮಹಾರಾಜರು ಜಮಖಂಡಿ ಜಿಲ್ಲೆ, ಬಾಗಲಕೋಟ–ಕುಡಚಿ ರೈಲು ಮಾರ್ಗ, ಜಂಬಗಿ ಸೇತುವೆ ನಿರ್ಮಾಣದ ಪ್ರಮುಖ ಬೇಡಿಕೆಗಳನ್ನು ಇಟ್ಟು, 1948ರಲ್ಲಿಯೇ ಜಮಖಂಡಿ ಜಿಲ್ಲೆಗೆ ಬೇಕಾಗುವ ಹಣವನ್ನು ಮೀಸಲು ಇಟ್ಟಿದ್ದಾರೆ. ಜತೆಗೆ ಜಮಖಂಡಿ ಜಿಲ್ಲೆಯನ್ನಾಗಿ ಮಾಡಬೇಕು ಎಂದು ಉಚ್ಚ ನ್ಯಾಯಾಲಯ ಆದೇಶ ಮಾಡಿದೆ. ಆದರೆ, ಇಲ್ಲಿಯವರೆಗೆ ಸರ್ಕಾರಗಳು ಅದನ್ನು ಕಾರ್ಯರೂಪಕ್ಕೆ ತರದೆ ನ್ಯಾಯಾಂಗ ನಿಂದನೆ ಮಾಡುತ್ತಿವೆ ಎಂದರು.

ಜಿಲ್ಲಾ ಸ್ಥಾನಮಾನಕ್ಕೆ ಬೇಡಿಕೆ ಇರುವ ಜಮಖಂಡಿ ಸಮಗ್ರ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 10 ಸಾವಿರ ಕೋಟಿ ರೂ.ಗಳ ವಿಶೇಷ ಅನುದಾನ ನೀಡಬೇಕು ಎಂದು ಆಗ್ರಹಿಸಿದರು.

ಜಮಖಂಡಿ ನಗರದಲ್ಲಿ ತಾಲೂಕು ಮಟ್ಟದ ಮೂರು ನ್ಯಾಯಾಲಯಗಳು, ಜಿಲ್ಲಾ ಮಟ್ಟದ ತ್ವರಿತಗತಿ ನ್ಯಾಯಾಲಯಗಳು ಸೇರಿ ಒಟ್ಟು 5 ನ್ಯಾಯಾಲಯಗಳು ಹಾಗೂ ಎಆರ್‌ಟಿಒ, ಉಪವಿಭಾಗ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಜಮಖಂಡಿ ಜಿಲ್ಲೆ, ಸಾವಳಗಿ ಮತ್ತು ಮಹಾಲಿಂಗಪೂರವನ್ನು ತಾಲೂಕು ಕೇಂದ್ರಗಳನ್ನಾಗಿ ಘೋಷಣೆ ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪಕ್ಷಾತೀತವಾಗಿ ಹೋರಾಟ ರೂಪಿಸಲಾಗುವುದು ಎಂದರು.

ರಾಯಬಾ ಜಾಧವ, ಪ್ರಶಾಂತ ಶಂಕರೆಪ್ಪಗೋಳ, ಮುತ್ತೂ ಲಕ್ಕನಗೌಡರ, ರಾಜೇಶ ಲಗಳಿ, ಅರುಣ ಲಗಳಿ, ರವಿ ಗೊಳಸಂಗಿ, ಶ್ರೀಮಂತ ಅಂಗಡಿ ಮತ್ತಿತರರಿದ್ದರು.

## ಹುನಗುಂದ ಪಟ್ಟಣ ಅಭಿವೃದ್ಧಿಗೆ ಕ್ರಮ: ಶಾಸಕ ವಿಜಯಾನಂದ ಕಾಶಪ್ಪನವರ




ಹುನಗುಂದ– ಪಟ್ಟಣವನ್ನು ಸುಂದರ ಮಾಡಲು ಶ್ರಮಿಸುತ್ತೇನೆ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.

ಇಲ್ಲಿನ ವಿಜಯಮಹಾಂತೇಶ ವೃತ್ತದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ಪುರಸಭೆಯ ಕಾರ್ಯಾಲಯದಿಂದ ಶನಿವಾರ ಹಮ್ಮಿಕೊಂಡಿದ್ದ 2022–23ನೇ ಸಾಲಿನ ಎಸ್‌ಎಫ್‌ಸಿ ವಿಶೇಷ ಅನುದಾನದಡಿ ಹುನಗುಂದ ಪುರಸಭೆಯಲ್ಲಿ ಬರುವ ರಾಯಚೂರು–ಬಾಚಿ ರಾಜ್ಯ ಹೆದ್ದಾರಿ–20ರ ಮಧ್ಯದ ಡಿವೈಡರ್‌ನಲ್ಲಿ ಅಳವಡಿಸಲಾದ ವಿದ್ಯುತ್ ಬೀದಿ ದ್ವೀಪಗಳ ನವೀಕರಣ ಹಾಗೂ ಹೊಸ ವಿದ್ಯುತ್ ಕಂಬ ಅಳವಡಿಸುವ ಕಾಮಗಾರಿ ಉದ್ಘಾಟಿಸಿದ ಮಾತನಾಡಿದರು.

ಪಟ್ಟಣದ ಬಹುದಿನಗಳ ಬೇಡಿಕೆಯಾಗಿದ್ದ ರಸ್ತೆಯ ಮಧ್ಯದ ಡಿವೈಡರ್ ಬೀದಿ ದ್ವೀಪಗಳು ಮತ್ತು ತಿರಂಗಾದ ಕೇಸರಿ, ಬಿಳಿ, ಹಸಿರು ಮಿಂಚಿನ ವಿದ್ಯುತ್ ಅನ್ನು ಅಳವಡಿಸಲಾಗಿದೆ. ಹುನಗುಂದ ನಗರವನ್ನು ಒಂದು ಸುಂದರ ನಗರವನ್ನಾಗಿ ಮಾಡುವ ಉದ್ದೇಶದಿಂದ ಅನೇಕ ಕಾಮಗಾರಿಯನ್ನು ಆರಂಭಿಸಲಾಗಿದೆ. 42 ಕೋಟಿ ವೆಚ್ಚದಲ್ಲಿ ಅಮೃತ–2 ಯೋಜನೆ ಅಡಿಯಲ್ಲಿ 24*7 ಕುಡಿಯುವ ನೀರನ್ನು ಹುನಗುಂದ ನಗರದ ಜನತೆಗೆ ಕೊಡುತ್ತೇವೆ ಎಂದರು.

ಹಿಂದಿನ ಅವಧಿಯ ಒಳಚರಂಡಿ ಯೋಜನೆ ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ.

ಪಟ್ಟಣದ ನಿವೇಶನ ರಹಿತರಿಗೆ 941 ಹಕ್ಕುಪತ್ರ ನೀಡಲಾಗಿದೆ. ಸುಮಾರು 500 ಮನೆಗಳ ಕಟ್ಟಡ ಪ್ರಾರಂಭಿಸಲಾಗುವುದು. ಈಗಾಗಲೇ 411 ಮನೆಗಳ ಲಾನುಭವಿಗಳ ಜಿಪಿಎಸ್, ಸರ್ವೇ ಆಗಿದೆ. ಕೆಲ ದಿನಗಳಲ್ಲಿ ಪುರಸಭೆಯ 24 ಎಕರೆ ಪ್ರದೇಶಗಳ ಮನೆಗಳ ನಿರ್ಮಿಸುವ ಎಲ್ಲ ಸಿದ್ಧತೆ ನಡೆದಿದ್ದು, ರಸ್ತೆ, ಚರಂಡಿ, ಬೀದಿ ದೀಪ ಸೇರಿ ಮೂಲಸೌಕರ್ಯ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.

ಪಟ್ಟಣದ ತಿಮ್ಮಾಪೂರ ರಸ್ತೆಯಲ್ಲಿಯಲ್ಲಿರುವ ಅಮೀರ ಅಮಜಾ ದರ್ಗಾ ಹತ್ತಿರ ಕರೆ ನಿರ್ಮಾಣಕ್ಕೆ 2 ಎಕರೆ ಜಾಗ ಪುರಸಭೆಗೆ ಹಸ್ತಾಂತರ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಸುಂದರ ಕೆರೆ ಮತ್ತು ವಾಕಿಂಗ್ ಟ್ರಾಕ್ ಅನ್ನು ನಿರ್ಮಿಸಲಾಗುವುದು. ಪಟ್ಟಣದ ಕ್ರೀಡಾಂಗಣದ ಹತ್ತಿರ 24 ಗುಂಟೆ ಜಾಗದಲ್ಲಿ ಸಾರ್ವಜನಿಕರಿಗೆ ಜಿಮ್ ಮತ್ತು ಈಜು ಕೊಳವನ್ನು ನಿರ್ಮಿಸಲಾಗುವುದು ಎಂದರು.

ಪುರಸಭೆಯ ಅಧ್ಯಕ್ಷೆ ಭಾಗ್ಯಶ್ರೀ ರೇವಡಿ, ಮುಖ್ಯಾಧಿಕಾರಿ ಗುರುರಾಜ ಚೌಕಿಮಠ ಮಾತನಾಡಿದರು. ಪುರಸಭೆಯ ಉಪಾಧ್ಯಕ್ಷೆ ರಾಜವ್ವ ಬಾದಾಮಿ, ಸದಸ್ಯರಾದ ಮಹ್ಮದಸಾಬ ದೋಟಿಹಾಳ, ಶಾಂತಾ ಮೇಲಿನಮನಿ, ಯಲ್ಲಪ್ಪ ನಡುವಿನಮನಿ, ಇದ್ದರು.

## ಪ್ರತಿಯೊಬ್ಬರಲ್ಲೂ ಧಾರ್ಮಿಕ ಭಾವನೆ ಬೆಳೆಯಲಿ



ಗುಳೇದಗುಡ್ಡ: ಪಟ್ಟಣದಲ್ಲಿ ವಿಶ್ವ ಹಿಂದು ಪರಿಷತ್ ಗುಳೇದಗುಡ್ಡ ಘಟಕದಿಂದ ಸಕಲ ಸಮಾಜದ ಮಾತೆಯರಿಂದ ಶಿವನ ಮೂರ್ತಿಗೆ ಅಭಿಷೇಕ ಹಾಗೂ ಧಾರ್ಮಿಕ ಕಾರ್ಯಕ್ರಮ ನೆರವೇರಿಸಲಾಯಿತು.

ನಿವೃತ್ತ ಮುಖ್ಯ ಶಿಕ್ಷಕಿ ಪ್ರಮೀಳಾ ಮುದ್ದಾಪುರ್ ಮಾತನಾಡಿ, ಪ್ರತಿಯೊಬ್ಬರು ಧಾರ್ಮಿಕ ಭಾವನೆ ಬೆಳಸಿಕೊಳ್ಳುವ ಮೂಲಕ ಸಾರ್ಥಕ ಜೀವನ ನಡೆಸಬೇಕು. ತಾಯಿಯರು ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಕಲಿಸಬೇಕು ಎಂದರು.

ದಾಮೋದರ ಆಚಾರ್ಯ ಆಶೀರ್ವಚನ ನೀಡಿದರು. ಪದ್ಮಜ ನಿರೇಗಲ್, ಮೀನಾಕ್ಷಿ ಅಂಬೇಕರ್, ರಾಘವೇಂದ್ರ ಬಸ್ಮಿ, ಮಹಾಗುಂಡಪ್ಪ ಅರಕಲಚಿಟ್ಟಿ , ಸಹನಾ, ಬನಶ್ರೀ, ಉಮಾಶಂಕರಿ, ಸ್ವಪ್ನ ಆಚನೂರ ಮತ್ತಿತರರಿದ್ದರು.

# ಧರ್ಮವೆಂದರೆ ಭಾರತ, ಭಾರತವೆಂದರೆ ಧರ್ಮ



ತಾಳಿಕೋಟೆ– ವೈರಾಗ್ಯಮೂರ್ತಿಗಳಾಗಿ ಏಕ ಮನಸ್ಸಿನಿಂದ ನಡೆದರೆ ಅಪೇಕ್ಷೀತರಿಗೆ ಪರಮಾತ್ಮನು ಕಾಣುತ್ತಾನೆ ಯಾವ ರೀತಿ ಜ್ಯೋತಿ ಎಲ್ಲರಿಗೂ ಬೆಳಕು ಕೊಡುತ್ತದೆಯೋ ಹಾಗೆ ಪರಮಾತ್ಮ ಈ ಪವಿತ್ರವಾದ ಭಾರತಭೂಮಿಯಲ್ಲಿ ಎಲ್ಲಡೆಯಲ್ಲಿಯೂ ವ್ಯಾಪಿಸಿದ್ದಾನೆಂದು ಖ್ಯಾತ ಪುರಾಣ ಪ್ರವಚನಕಾರರಾದ ಶರಣಸೋಮನಾಳದ ಶ್ರೀ ಮಹಾದೇವಯ್ಯ ಶಾಸ್ತ್ರೀಗಳು ನುಡಿದರು.

ರವಿವಾರರಂದು ಶ್ರೀ ಶರಣಮುತ್ಯಾರವರ ಜಾತ್ರೋತ್ಸವ ನಿಮಿತ್ಯವಾಗಿ ಶ್ರೀಮಠದ ಪ್ರಾಂಗಣದಲ್ಲಿ ಏರ್ಪಡಿಸಲಾದ ಶ್ರೀ ಪವಾಡ ಬಸವೇಶ್ವರರವರ ಮಹಾ ಪುರಾಣದ 2ನೇ ದಿನದಂದು ಮಾತನಾಡುತ್ತಿದ್ದ ಅವರು ಧರ್ಮ ಪದವೆಂಬುದು ಭಾರತೀಯ ಸಂಸ್ಕೃತಿಯ ಜೀವಾಳವಾಗಿದೆ ಎಲ್ಲವೂ ಧರ್ಮದ ಮೇಲೆ ನಿಂತಿದೆ.

ಪ್ರತಿಯೊಂದು ಕ್ಷೇತ್ರಕ್ಕೂ ವ್ಯಕ್ತಿಗೂ, ವಸ್ತುವಿಗೂ ತನ್ನದೇ ಆದ ಧರ್ಮವಿದೆ ಆ ಧರ್ಮವೇ ಎಲ್ಲರನ್ನು ಕಾಪಾಡುತ್ತದೆ ಎಂದರು. ಧರ್ಮಪದದ ಅರ್ಥ ಸಂರಕ್ಷಣೆ ಎನ್ನುವದಾಗಿದೆ ರಕ್ಷಣೆ ಧರ್ಮದ ಗುರಿಯಾಗಿದೆ.

ಧರ್ಮವೆಂದರೆ ಇಲ್ಲಿ ಮಾನವ ನಿರ್ಮಿತ ಹೊಡೆದಾಡಿ ಬಡೆದಾಡಿ ರಕ್ತಕ್ರಾಂತಿ ಮಾಡುವಂತಹದ್ದು ಧರ್ಮವಲ್ಲಾ ಸಕಲ ಜೀವಿಗಳಿಗೂ ಒಳಿತಾಗುವಂತಿರಬೇಕು ಸರ್ವೇ ಜನಾ ಸುಖಿನೌ ಭೌವಂತು ಎನ್ನುವ ದೃಷ್ಟಿಕೋನವಿದ್ದರೆ ಅದು ಧರ್ಮವೆನಿಸಿಕೊಳ್ಳುತ್ತದೆ ಎಂದರು.

ತಾಳಿಕೋಟೆ ಪಟ್ಟಣದಲ್ಲಿ ಈ ಹಿಂದೆ ಶಿವಯೋಗಿಗಳು, ಧಾರ್ಶನಿಕರು ಹುಟ್ಟಿ ಬೆಳೆದಂತಹ ಭೂಮಿ ಇದಾಗಿದೆ ಈ ಭೂಮಿ ಧರ್ಮದ ಹಾಗೂ ಶಾಂತಿಯ ಭೂಮಿ ಇದಾಗಿದ್ದು ಇಲ್ಲಿ ಶ್ರೀ ಖಾಸ್ಗತರು, ಸಾಂಭಪ್ರಭು ಶರಣರು, ಮಹಾತ್ಮರು ನಡೆದಾಡಿದಂತಹ ಭೂಮಿ ಇದಾಗಿದೆ ಎಂದರು.

ಇಂತಹ ಮಹಾತ್ಮರು ಎಲ್ಲಡೆಯಲ್ಲಿಯೂ ಅವತರಿಸುತ್ತಾರೆಂದು ಹೇಳಲು ಸಾದ್ಯವಿಲ್ಲಾ ಅಂಗವೇ ಲಿಂಗವೆಂಬ ಬಸವಣ್ಣನವರ ವಚನದಂತೆ ಲಿಂಗಾರ್ಚನೆ ಮಾಡಿಕೊಂಡು ಮನದಟ್ಟು ಮಾಡುತ್ತಿದ್ದ ಆ ಶ್ರೀಗಳು ಅಂಗದ ಮೇಲೆ ಲಿಂಗವನ್ನು ಸದಾ ಹಾಕಿಕೊಂಡು ಭಕ್ತಾಧಿಗಳಿಗೂ ಸಹ ಲಿಂಗದಾರಣೆ ಮಾಡಿಕೊಳ್ಳಲು ಹಾಗೂ ರುದ್ರಾಕ್ಷೀ ಧರಿಸಿಕೊಳ್ಳಲು ತಿಳಿಸುತ್ತಿದ್ದರೆಂದರು.

ಇಂತಹ ಶ್ರೀಗಳು ಜನ್ಮ ತಾಳಿರುವದು ನಮ್ಮಂತಹ ಮನುಜರ ಮನಸ್ಸನ್ನು ಪವಿತ್ರ ಮಾಡಲು ಅವತರಿಸಿ ಬಂದಿರುತ್ತಾರೆಂದು ಹೇಳಿದ ಪುರಾಣಿಕರು ಜೀವನದಲ್ಲಿ ಸತ್ತು ಬಧುಕಿದವರು ಇದ್ದಾರೆ ಸತ್ತು ಸತ್ತವರಂತೆ ಇದ್ದಾರೆ.

ಇದ್ದೂ ಸತ್ತವರಂತೆ ಇದ್ದಾರೆಂದು ಹೇಳಿದ ಶಾಸ್ತ್ರೀಗಳು ಈ ಮಹಾತ್ಮರು ಹಾಗೂ ಶಿವಯೋಗಿಗಳು ಲಿಂಗೈಕ್ಯರಾಗಿ ಸುಮಾರು 200 ಕ್ಕೂ ಹೆಚ್ಚುವರ್ಷ ಘತಿಸಿದರೂ ಇನ್ನೂ ಬಧುಕಿದವರಂತೆ ಇದ್ದಾರೆ ಅವರ ಪವಾಡಗಳು ಇಂದಿಗೂ ನಡೆಯುತ್ತಲಿವೆ ಎಂದರು.

ಪವಾಡ ಬಸವೇಶ್ವರ ಅವರ ಪುರಾಣವನ್ನು ರಚನೆ ಮಾಡಿದವರು ಹಗರಟಗಿಯ ದಿ.ವೀರಸಂಗಪ್ಪನವರು ಆಗಿದ್ದಾರೆ ಯಾವುದೇ ಕಾರ್ಯ ಯಶಸ್ವಿಕಾಣಬೇಕಾದರೆ ಅದಕ್ಕೆ ಗುರುವಿನ ಸ್ಮರಣೆಯಾಗಬೇಕೆಂದರು. ಜಗತ್ತಿನ ತಂದೆ ತಾಯಿ ಶಿವ ಪಾರ್ವತಿಯರಾಗಿದ್ದಾರೆ ಧಾನ ಧರ್ಮ ಮಾಡುವ ಸಹಾಯ ಕೆಲಸ ಮಾಡುವವರಿಗೆ ದೇವನು ಪ್ರೀತಿಸುತ್ತಾನೆ.

ಧರ್ಮಕ್ಕಾಗಿ ದುಡಿದವರಿಗೆ ಸಂಪತ್ತಬರಿತರನ್ನಾಗಿ ಮಾಡುತ್ತಾನೆ ಯಾವ ಕೈಗಳಿಂದ ಮಾಡುವದು ಯಾವ ಕಿವಿಗಳಿಂದ ಕೇಳಬೇಕಾಗಿದ್ದು ಒಳ್ಳೆಯದನ್ನೇ ಅಂತರಂಗದಲ್ಲಿ ಅಳವಡಿಸುವ ಕಾರ್ಯ ನಡೆಯಬೇಕಾಗಿದುದ್ದು ಇಂದಿನ ದಿನಮಾನದಲ್ಲಿ ನಡೆಯುತ್ತಿಲ್ಲಾವೆಂದು ವಿಷಾದಿಸಿದ ಶಾಸ್ತ್ರೀಗಳು ಜಗತ್ತಿನ ಮೂಲ ಪುರುಷ ಸದಾಶಿವ ಅವತಾರಿಗೆ ಕಾಶಿ ನಗರಕ್ಕೆ ಆಗಮಿಸುತ್ತಾರೆ ನಮ್ಮ ಧರ್ಮ ಸನಾತನ ಧರ್ಮವಾಗಿದೆ ಕಾಶಿಯಲ್ಲಿ ನಡೆದಂತಹ ಕೆಲವು ಪವಾಡ ಕಥೆಗಳನ್ನು ವಿವರಿಸಿದ ಅವರು ಭಗವಂತನನ್ನು ಕಾಣಬೇಕಾದರೆ ಗುರು ರೂಪದಲ್ಲಿ ಕಾಣಬೇಕಾಗಿದೆ ಗುರು ಎಲ್ಲಿದ್ದಾನೆ ಏನು ಮಾಡುತ್ತಲಿದ್ದಾನೆ.

ಮುಖ ಯಾವ ಕಡೆ ಮಾಡಿದ್ದಾನೆಂಬ ಪ್ರಶ್ನೆಗೆ ಒಂದು ವಾರವಾದರೂ ಉತ್ತರ ಸಿಗಲಿಲ್ಲಾ ಈ ಉತ್ತರಕ್ಕಾಗಿ ರಾಜನ ಬಳಿಗೆ ಬಂದ ತಂದೆ ಮಗಳ ಚಿಕ್ಕ ಕಥೆಯೊಂದನ್ನು ವಿವರಿಸಿ ಭಕ್ತ ಸಮೂಹಕ್ಕೆ ಮನವರಿಕೆ ಮಾಡಿದ ಅವರು ಬಸರಕೋಡ ಪವಾಡ ಬಸವೇಶ್ವರರ ಮಠ ಯಾವಾಗಲೂ ದಾಸೋಹಕ್ಕೆ ಪ್ರಸಿದ್ದಿ ಪಡೆದಿದ್ದು.

ಅಲ್ಲಿ ಸಾಧು ಸಂತರು ಕೂಡಾ ದಿನನಿತ್ಯ ಆ ದೇವಾಲಯದಲ್ಲಿ ಇಳಿದು ತಮ್ಮ ಊಟೋಪಚಾರ ಮಾಡಿಕೊಂಡು ಸಾಗುವಂತಹ ಕಾರ್ಯ ಯಾವಾಗಲೂ ನಡೆದೇ ಇದೆ ಅಂತಹ ಪವಾಡ ಬಸವೇಶ್ವರರ ಪುರಾಣ ಇಲ್ಲಿ ಪ್ರಾರಂಭಗೊಂಡಿರುವದು ಎಲ್ಲರಿಗೂ ಆದ್ಯಾತ್ಮ ಮಾರ್ಗಕ್ಕೆ ಕೊಂಡೊಯಲಿದೆ ಎಂದು ನಿಡಗುಂದಿ ಗ್ರಾಮದ ಗುರಲಿಂಗಪ್ಪ ಮಲ್ಲಮ್ಮ ದಂಪತಿಗಳ ಸುಃಖವಾಗಿ ಸಂಸಾರ ನಡೆಸುತ್ತಿದ್ದ ಈ ದಂಪತಿ ಪರಮಾತ್ಮ ದ್ಯಾನದಲ್ಲಿಯೇ ಇರುವಂತವರು ಸದಾ ಪರಮಾತ್ಮನ ದ್ಯಾನದಲ್ಲಿಯೇ ಪುತ್ರ ಸಂತಾನಕ್ಕಾಗಿ ಅಪೇಕ್ಷೀಸುತ್ತಾ ಸಾಗುತ್ತಾರೆಂದರು.

ಈ ಸಮಯದಲ್ಲಿ ಶ್ರೀ ಶರಣರ ಮಠದ ಬಸಣ್ಣ ಶರಣಮುತ್ಯಾರವರು, ಶರಣಪ್ಪಮುತ್ಯಾರವರು, ಆನಂದ ಶರಣರು, ಸಂಗಮೇಶ ಶರಣರು, ಕಾಶಿರಾಯ ದೇಸಾಯಿ, ಗುರುಮೂರ್ತಿ ಹಿರೇಮಠ, ಮಹಾದೇವಿ ಹಾವಿನಾಳ, ಮಲ್ಲಣ್ಣ ಶರಣರು, ಭೀಮಣ್ಣ ಇಂಗಳಗಿ, ಗುರು ಶರಣರು, ಮೊದಲಾದವರು ಉಪಸ್ಥಿತರಿದ್ದರು. ಸಂಗೀತ ಸೇವೆಯನ್ನು ರಾಜು ಗುಬ್ಬೇವಾಡ, ಬಸನಗೌಡ ಬಿರಾದಾರ ಅವರು ನಡೆಸಿಕೊಟ್ಟರು.

ಶರಣಗೌಡ ಪೊಲೀಸ್‌ಪಾಟೀಲ ಸ್ವಾಗತಿಸಿದರು. ಈರಣ್ಣ ಶರಣರ ನಿರೂಪಿಸಿ ವಂದಿಸಿದರು.

# ಬೆಳೆಯುವ ನಗರಕ್ಕೆ ಸೌಕರ್ಯಗಳ ಒದಗಿಸುವದು ಅವಶ್ಯ:ನಾಡಗೌಡ



ತಾಳಿಕೋಟೆ– ಅತೀ ವೇಗವಾಗಿ ಬೆಳೆಯುತ್ತಿರುವ ನಗರಕ್ಕೆ ಅವಶ್ಯವಿರುವ ಎಲ್ಲ ಸೌಕರ್ಯಗಳನ್ನು ಒದಗಿಸುವದು ಜನಪ್ರತಿನಿಧಿಗಳ ಆದ್ಯ ಕರ್ತವಾಗಿದೆ ಈ ನಿಟ್ಟಿನಲ್ಲಿ ತಾಳಿಕೋಟೆ ನಗರಕ್ಕೆ ಅವಶ್ಯವಾಗಿ ಬೇಕಾಗುವ ಎಲ್ಲ ಸೌಕರ್ಯಗಳನ್ನು ಒದಗಿಸುವ ಪ್ರಾಮಾಣಿಕ ಕಾರ್ಯವನ್ನು ನಾನು ಮಾಡುತ್ತಾ ಬಂದಿದ್ದೇನೆಂದು ಕರ್ನಾಟಕ ಸೋಪ್ಸ್ & ಡಿಟರ್ಜಂಟ್ ನಿಗಮ ಮಂಡಳಿ ಅಧ್ಯಕ್ಷ ಶಾಸಕ ಸಿ.ಎಸ್.ನಾಡಗೌಡ(ಅಪ್ಪಾಜಿ) ಅವರು ಹೇಳಿದರು.

ಶುಕ್ರವಾರರಂದು ಜಿಲ್ಲಾಡಳಿತ ವಿಜಯಪುರ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಪುರಸಭೆ ತಾಳಿಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿ ತಾಳಿಕೋಟೆ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ವಿತರಣಾ ವ್ಯವಸ್ಥೆ ಕಲ್ಪಿಸುವ ಯೋಜನೆ ಹಂತ 1 ಮತ್ತು 2 ಕ್ಕೆ ಭೂಮಿ ಪೂಜೆನೇರವೇರಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ತಾಳಿಕೋಟೆ ನಗರಕ್ಕೆ ಮುಂದಿನ 50 ವರ್ಷಗಳ ಜನಸಂಖ್ಯೆಯ ಮುಂದಾಲೋಚನೆಯೊಂದಿಗೆ 24x7 ಕುಡಿಯುವ ನೀರಿನ ಯೋಜನೆಯನ್ನು ರೂಪಿಸಲಾಗಿದೆ.

ಈ ಯೋಜನೆಯ ಸಾಕಾರದಿಂದ ಕುಡಿಯುವ ನೀರಿನ ತೊಂದರೆ ಎಂಬುದೇ ಬರುವದಿಲ್ಲಾ ಈ ಹಿಂದೆ ಇಲ್ಲಿಯ ಜನ ಸಂಖ್ಯೆಗನುಗುಣವಾಗಿ ಮಾಳನೂರ ಗ್ರಾಮದಲ್ಲಿ 22 ಏಕರೆಯಲ್ಲಿ ಕೇರೆಯನ್ನು ನಿರ್ಮಿಸಿ ಸಿಹಿ ನೀರು ಒದಗಿಸುವಂತಹ ಕೆಲಸ ಮಾಡಿದೇವು ಆದರೆ ಪಟ್ಟಣದ ಬೆಳವಣಿಗೆ ವೇಗವಾಗಿದ್ದರಿಂದ ಕೇರೆಗೆ ಈ ಹಿಂದೆ 55 ಲಕ್ಷ ರೂ. ಖರ್ಚುಮಾಡಿ ಕೇರೆಯ ಆಳವನ್ನು ಹೆಚ್ಚಿಸಿ ಕುಡಿಯುವ ನೀರು ಕಡಿಮೆ ಬಿಳ್ಳದ ಹಾಗೆ ಕೆಲಸವನ್ನು ಮಾಡಿದ್ದೇವೆ ಇಲ್ಲಿಯವರೆಗೆ ಈ ಕ್ಷೇತ್ರದಲ್ಲಿ ಸಾಕಷ್ಟು ಜನ ಕೆಲಸ ಮಾಡುತ್ತಾ ಬಂದಿದ್ದೇವೆ.

ಆದರೆ ಈ ಕೆಲಸ ನನ್ನಿಂದಾಯಿತು ಎಂದು ಜಂಬಕೊಚ್ಚಿಕೊಳ್ಳುವಂತಹ ಕೆಲಸ ನಾನೇಂದು ಮಾಡಿಲ್ಲಾ ಆದರೆ ಕೇವಲ ಒಂದು ಭಾರಿ ಶಾಸಕರಾದವರು ನಾನು ಮಾಡಿದ್ದು ನಾನು ಮಾಡಿದ್ದು ಎಂದು ಹೇಳಿಕೊಳ್ಳುತ್ತಾ ಸುತ್ತಾಡುತ್ತಿರುವದನ್ನು ನೋಡಿದರೆ ಇವರಿಗೆ ಅಭಿವೃದ್ಧಿಗಿಂತ ಜಂಬಕೊಚ್ಚಿಕೊಳ್ಳುವದೇ ಮುಖ್ಯವೆನಿಸುತ್ತಿದೆ ತಾಳಿಕೋಟೆ ಪಟ್ಟಣಕ್ಕೆ 24x7 ಕುಡಿಯುವ ನೀರಿನ ಯೋಜನೆ ರೂಪಿಸುವದು ಈಗೀನಿಂದ ಬಂದಿಲ್ಲಾ 2002–03ರಲ್ಲಿ ರಜ್ಯೂಲೇಶನ್ ಮಾಡಿಸಿ ಡಿಪಿಆರ್ ತಯಾರಿಸಿ ಈ ಊರಿನ ನೀಲಿನಕ್ಷೆಯೊಂದಿಗೆ ಯೋಜನೆಯ ಜಾರಿಗೆ ಸರ್ಕಾರದ ಮೇಲೆ ಒತ್ತಡ ಹಾಕುತ್ತಾ ಬಂದಿದ್ದೆ.

ಮತ್ತೇ 2015ರಲ್ಲಿಯೂ ಕೂಡಾ ನೀಲಿ ನಕ್ಷೆ ಸಬ್ಮಿಟ್ ಮಾಡಿದ್ದೇ ಈ ಯೋಜನೆಗೆ ಕಳೆದ ಭಾರಿ ಹಿಂದಿನ ಶಾಸಕರೂ ಕೂಡಾ ಲೇಟರ್ ಕೊಟ್ಟಿದ್ದಾರೆ ಆದರೆ ಯೋಜನೆ ಕಾರ್ಯರೂಪಕ್ಕೆ ಬಂದಿದಿಲ್ಲಾ ಈಗ ಆ ಯೋಜನೆ ಒಂದು ಹಂತಕ್ಕೆ ತಂದು ಪ್ರಾರಂಬಿಸುವಂತಹ ಕೆಲಸ ಮಾಡಿದ್ದೇನೆಂದರು. ಈ 24x7 ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಸರ್ಕಾರವು ಶೇ.50 ರಷ್ಟು ಹಣ ರಾಜ್ಯ ಸರ್ಕಾರ ಶೇ.40, ಮತ್ತು ಸ್ಥಳೀಯ ಸಂಸ್ಥೆಯಿಂದ ಶೇ.10 ರಷ್ಟು ಸೇರಿ ಈ ಯೋಜನೆ ರೂಪಗೊಂಡಿದೆ ಸರ್ಕಾರ ಯಾವುದೇ ಕೆಲಸ ಮಾಡಿದರೂ ನಮ್ಮ ಜನರು ಕಟ್ಟಿದ ತೆರಿಗೆ ಹಣದಿಂದ ಯೋಜನೆಗಳ ಮೂಲಕ ಕೊಡುತ್ತದೆ ಎಂಬುದು ಯಾರೂ ಮರಿಬಾರದು ದೇಶವನ್ನು ಮಾತಿನಿಂದ ಕಟ್ಟಲು ಸಾದ್ಯವಿಲ್ಲಾ ಕೃತಿಯಿಂದ ಕಟ್ಟಲು ಸಾದ್ಯವಿದೆ ತಾಳಿಕೋಟೆ ಡೋಣಿ ನಧಿಗೆ ಅವಶ್ಯವಿರುವ ಸೇತುವೆ ನಿರ್ಮಾಣಕ್ಕೆ 24 ಕೋಟಿ ರೂ. ಮಂಜೂರಾಗಿದೆ ಟೆಂಡರ್‌ಕೂಡಾ ಆಗಿದೆ ಕೂಡಲೇ ಕಾಮಗಾರಿ ಪ್ರಾರಂಬವಾಗಲಿದೆ.

ಅವರು ಇದರ ಜೊತೆಗೆ ಉಕ್ಕಲಿ, ಸಾಸನೂರ, ತಂಗಡಗಿ ರಸ್ತೆ ಸುದಾರಣೆಗೂ ಕೂಡಾ ಹಣ ಮಂಜೂರಾಗಿದೆ ಫೀರಾಪೂರ–ಬೂದಿಹಾಳ ಏತ ನೀರಾವರಿ ಯೋಜನೆಯ ಕಾಮಗಾರಿ ಅರ್ದಕ್ಕೆ ನಿಂತಿರುವದನ್ನು ಪೂರ್ಣಗೊಳಿಸಲು ಸರ್ಕಾರ ಮುಂದಾಗಿದ್ದು ಅದಕ್ಕೂ ಕೂಡಾ ಚಾಲನೆ ಕೊಡಲಿದ್ದೇವೆ ಆಲಮಟ್ಟಿ ಡ್ಯಾಂ 524 ಕ್ಕೆ ಎತ್ತಿರಿಸಲು ಮುಖ್ಯಮಂತ್ರಿಗಳು ವರ್ಷಕ್ಕೆ 20 ಸಾವಿರ ಕೋಟಿ ರೂ. ಒದಗಿಸುವದಾಗಿ ಹೇಳಿದ್ದಾರೆ ಇದರಿಂದ ವಿಜಯಪುರ ಜಿಲ್ಲೆ ಒಂದು ಇಂಚು ಉಳಿಯದ ಹಾಗೆ ನೀರಾವರಿಯಾಗಲಿದೆ ಇದರಿಂದ 80 ಟಿಎಂಸಿ ನೀರು ನಮ್ಮ ಜಿಲ್ಲೆಗೆ ಸಿಗಲಿದೆ ಎಂದರು. ಗ್ಯಾರೆಂಟಿ ಯೋಜನೆ ಅನುಷ್ಠಾನದಿಂದ ಎಲ್ಲ ಜನರಿಗೆ ಅನುಕೂಲವಾಗಿದೆ.

ಈ ವರ್ಷದಿಂದ 63 ಸಾವಿರ ಕೋಟಿ ರೂ. ಖರ್ಚು ತಗುಲುತ್ತಿದ್ದು ಈ ಯೋಜನೆಯ ಸಾಕಾರದೊಂದಿಗೆ ಅಭಿವೃದ್ಧಿ ಕಾರ್ಯಗಳಿಗೂ ಹಣ ಹರಿದುಬರಲಿದೆ ಹಿಂದಿನ ಸರ್ಕಾರದವರು ಕೆಲಸ ಮಾಡಿದ ಗುತ್ತಿಗೆದಾರರ ಭಾಕಿ 2 ಲಕ್ಷ ಕೋಟಿ ರೂ. ಹಾಗೆ ಇಟ್ಟು ಹೋಗಿದ್ದರಿಂದ ಅದನ್ನು ಸರಿದೂಗಿಸಲು ಕಷ್ಟವಾಯಿತು ಈಗ ಕೇವಲ 30 ಸಾವಿರ ಕೋಟಿ ಉಳಿದಿದ್ದು ಅದನ್ನು ಕೂಡಾ ಸರ್ಕಾರ ಬಿಡುಗಡೆ ಮಾಡಲಿದೆ ಎಂದು ಶಾಸಕ ನಾಡಗೌಡ ಅವರು ಹೇಳಿದರು. ಕಾರ್ಯಕ್ರಮಕ್ಕೂ 24x7 ಕುಡಿಯುವ ನೀರಿನ ಯೋಜನೆಗೆ ಭೂಮಿ ಪೂಜಾ ಕಾರ್ಯಕ್ರಮವನ್ನು ನೇರವೇರಿಸಲಾಯಿತು. ಇದೇ ಸಮಯದಲ್ಲಿ ಶಾಸಕರಿಗೆ, ಪುರಸಭೆ ಅಧ್ಯಕ್ಷ–ಉಪಾದ್ಯಕ್ಷ ಮತ್ತು ಸದಸ್ಯರುಗಳಿಗೆ ಅಲ್ಲದೆ ಗಣ್ಯಮಾನ್ಯರಿಗೆ ಸನ್ಮಾನಿಸಿ ಗೌರವಿಸಲಾಯಿತು.

# ಅಧಿಕಾರ ಹಂಚಿಕೆ; ಸಿದ್ದು– ಡಿಕೆಶಿ ಯುದ್ಧ ಆರಂಭ; ಜಗದೀಶ್ ಶೆಟ್ಟರ್ ಟೀಕೆ




ಬೆಳಗಾವಿ– ರಾಜ್ಯ ಸರ್ಕಾರದ ಅಧಿಕಾರ ಹಂಚಿಕೆಯ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ ನಡುವೆ ಯುದ್ದ ಆರಂಭವಾಗಿದ್ದು, ಇವತ್ತೋ ನಾಳೆ ಸರ್ಕಾರ ಬಿದ್ದು ಹೋಗುತ್ತದೆ ಎಂದು ಸಂಸದ ಜಗದೀಶ ಶೆಟ್ಟರ್ ವಾಗ್ದಾಳಿ ನಡೆಸಿದರು.

ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಶುಕ್ರವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್‌ನಲ್ಲಿ ಒಳಜಗಳ ತೀವ್ರರೂಪ ಪಡೆದುಕೊಂಡಿದ್ದು, ಸಿಎಂ ಸಿದ್ದರಾಮಯ್ಯ ಪರ ಸಚಿವರಾದ ಎಂ.ಬಿ. ಪಾಟೀಲ, ಕೆ.ಎನ್.ರಾಜಣ್ಣ ಸೇರಿ ಕೆಲ ಶಾಸಕರು ಮಾತನಾಡುತ್ತಿದ್ದಾರೆ. ಇದರಿಂದಾಗಿ ಕಾಂಗ್ರೆಸ್ ಒಬ್ಬಂಟಿಯಾಗಿರುವ ಡಿ.ಕೆ.ಶಿವಕುಮಾರ ಹಿಂದೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣೀಟ್ಟಿರುವ ಡಿ.ಕೆ.ಶಿವಕುಮಾರ ಅವರು ಬೇರೆ ಬೇರೆ ರೂಪದಲ್ಲಿ ತಮ್ಮ ಆಸೆಯನ್ನು ಹೊರ ಹಾಕುತ್ತಿದ್ದಾರೆ. ಆದರೆ, ಅದಕ್ಕೆ ಕಾಂಗ್ರೆಸ್‌ನಲ್ಲಿ ಯಾರು ಮನ್ನಣೆ ಕೊಡುತ್ತಿಲ್ಲ. ಹೀಗಾಗಿಯೇ ಸರ್ಕಾರದಲ್ಲಿ ಅಭಿವೃದ್ಧಿಗಿಂತ ಅಧಿಕಾರ ಹಂಚಿಕೆ ವಿಷಯದಲ್ಲಿ ಗಲಾಟೆ ಆರಂಭವಾಗಿದೆ. ಒಬ್ಬರೊಬ್ಬರನ್ನು ಎತ್ತಿ ಕಟ್ಟಿ ಅಧಿಕಾರ ಗಟ್ಟಿಗೊಳಿಸುವಲ್ಲಿ ಸಚಿವರು ತೊಡಗಿದ್ದಾರೆ ಎಂದು ಟೀಕಿಸಿದರು.

ಗಡಿ ವಿಷಯದಲ್ಲಿ ಸರ್ಕಾರ ವೈಫಲ್ಯ ಗಡಿ ಭಾಗದಲ್ಲಿ ಸಂಭವಿಸುವ ಪ್ರತಿಯೊಂದು ಘಟನೆಯನ್ನು ಭಾಷಾ ವಿಷಯವಾಗಿ ಪರಿವರ್ತನೆವಾಗುವುದು ನನಗೆ ಇಷ್ಟವಿಲ್ಲ. ಬೆಳಗಾವಿ ನಗರ, ಗ್ರಾಮೀಣ ಭಾಗದಲ್ಲಿ ಎಲ್ಲಿಯೂ ಭಾಷಾ ಸಮಸ್ಯೆ ಇಲ್ಲವೇ ಇಲ್ಲ. ಎಲ್ಲ ಭಾಷಿಕರು ಪರಸ್ಪರ ಅನ್ಯೂನವಾಗಿದ್ದಾರೆ.

ಹಾಗಾಗಿ ಎಲ್ಲ ಸಮಸ್ಯೆಗಳನ್ನು ಭಾಷಾ ವಿಷಯಕ್ಕೆ ಜೋಡಣೆ ಮಾಡಿಕೊಂಡು ಹೋದರೆ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆ ಉಂಟಾಗಲಿದೆ. ಸರ್ಕಾರಿ ನೌಕರರ ಮೇಲೆ ಹಲ್ಲೆ ನಡೆಸಿದವರನ್ನು ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿಕೊಂಡು ಬಂದಿದ್ದೇನೆ. ಭಾಷಾ ವಿಷಯದಲ್ಲಿ ಮತ ಬ್ಯಾಂಕ್ ವಿಷಯ ಬರುವುದಿಲ್ಲ.

ರಾಜ್ಯದ ಗಡಿಭಾಗದ ಪ್ರದೇಶಗಳಲ್ಲಿ ಗಡಿ ವಿಷಯಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಭಾಷಾ ಸಮಸ್ಯೆ ಪರಿಹರಿಸಲು ಮುಂದಾಗದೆ ವಿವಾದಕ್ಕೆ ಎಡೆ ಮಾಡಿಕೊಟ್ಟಿದ್ದಾರೆ.

# ಸೇವಾ ನಿವೃತ್ತಿ: ಬಿ.ಎಲ್. ತಳವಾರ ಅವರಿಗೆ ಬಿಳ್ಕೊಡುಗೆ



ಬೆಳಗಾವಿ– ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಕಳೆದ ಮೂರು ದಶಕಗಳಿಂದ ಸೇವೆ ಸಲ್ಲಿಸಿದ ಬಸವಣ್ಣೆವ್ವ ತಳವಾರ ಅವರು ಸೇವಾ ನಿವೃತ್ತಿ ಹೊಂದಿದ ಹಿನ್ನಲೆಯಲ್ಲಿ ಶುಕ್ರವಾರ(ಫೆ.28) ಸನ್ಮಾನಿಸಿ, ಬೀಳ್ಕೊಡಲಾಯಿತು.

ವಾರ್ತಾ ಭವನದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕಳೆದ ಮೂರು ದಶಕಗಳಿಂದ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದು ಸಂತೋಷದ ಸಂಗತಿಯಾಗಿದೆ. ಮೂರು ದಶಕಗಳ ಕಾಲ ಸೇವಾ ಅವಧಿಯಲ್ಲಿ ಸಹಕರಿಸಿದ ಎಲ್ಲ ಅಧಿಕಾರಿ ಸಿಬ್ಬಂದಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕರಾದ ಗುರುನಾಥ ಕಡಬೂರ ಅವರು, ಮೂರು ದಶಕಗಳ ಕಾಲ ಸರಕಾರಿ ಸೇವೆ ಸಲ್ಲಿಸಿರುವುದು ಅವರ ಬದುಕಿನ ಮಹತ್ವದ ಸಂಗತಿಯಾಗಿದ್ದು, ನಿವೃತ್ತಿ ಜೀವನ ಇನ್ನಷ್ಟು ಉತ್ತಮವಾಗಿರಲಿ ಎಂದು ಹಾರೈಸಿದರು.

ಅವರ ಸೇವೆಯು ತೃಪ್ತಿದಾಯಕವಾಗಿದ್ದು, ಕಚೇರಿಯ ಸಮಯಕ್ಕೆ ಸರಿಯಾಗಿ ಹಾಜರಾಗಿ ತಮ್ಮ ಕರ್ತವ್ಯದ ಜೊತೆಗೆ ಸಮಯ ಪಾಲನೆಗೆ ಒತ್ತು ನೀಡುತ್ತಿದ್ದರು ಎಂದು ಸ್ಮರಿಸಿದರು.

ಕಚೇರಿಯ ಪ್ರಥಮ ದರ್ಜೆ ಸಹಾಯಕರಾದ ಅನಂತ ಪಪ್ಪು, ಎಂ.ಎಲ್.ಜಮಾದಾರ, ವಾರ್ತಾ ಸಹಾಯಕರಾದ ವಿಜಯಕುಮಾರ್ ಬೆಟಗೇರಿ, ಚಾಲಕರಾದ ಉಳವಯ್ಯ ಗೊಡಚಿಮಠ ಹಾಗೂ ಹಿತೈಷಿಗಳು ತಮ್ಮಅನಿಸಿಕೆಗಳನ್ನು ಹಂಚಿಕೊಂಡು ಬಿ.ಎಲ್. ತಳವಾರ ಅವರ ಸೇವಾ ನಿವೃತ್ತಿ ಬದುಕು ಸುಖಕರವಾಗಿರಲಿ ಎಂದು ಶುಭ ಹಾರೈಸಿದರು.

ಪತ್ರಕರ್ತರಾದ ಪ್ರಶಾಂತ ಮಲಗಾವಿ, ರಜನಿಕಾಂತ್ ಯಾದವಾಡೆ, ವಾರ್ತಾ ಇಲಾಖೆಯ ಸಿಬ್ಬಂದಿಗಳಾದ ಅರುಣ ನೇಸರಗಿ, ಅಮರ ಕಾಗೆ, ಚಂದು ಜಾಲಗಾರ ಸೇರಿದಂತೆ ಬಿ.ಎಲ್. ತಳವಾರ ಅವರ ಕುಟುಂಬಸ್ಥರು, ಹಿತೈಷಿಗಳು ಉಪಸ್ಥಿತರಿದ್ದರು.

# ಗ್ರಂಥಾಲಯದಲ್ಲಿ "ರಾಷ್ಟ್ರೀಯ ವಿಜ್ಞಾನ ದಿನ" ಆಚರಣೆ



ಬೆಳಗಾವಿ– ನಗರದ ಕೇಂದ್ರ ಗ್ರಂಥಾಲಯದಲ್ಲಿ ಫೆ.28 ರಂದು "ರಾಷ್ಟ್ರೀಯ ವಿಜ್ಞಾನ ದಿನ" ಆಚರಣೆ ಮಾಡಲಾಯಿತು. ಉಪನಿರ್ದೇಶಕರಾದ ಶ್ರೀ ರಾಮಯ್ಯ ಅವರ ಮಾರ್ಗದರ್ಶನದಲ್ಲಿ ನಗರ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯದ ಎಲ್ಲಾ ಸಿಬ್ಬಂದಿ ಮತ್ತು ಓದುಗರು ಸೇರಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಪ್ರತಿ ವರ್ಷ ಫೆ 28 ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ ಮಾಡಲಾಗುತ್ತದೆ. 2025 ರ ಧ್ಯೇಯ ವಾಕ್ಯ 'ವಿಜ್ಞಾನದಲ್ಲಿ ಯುವ ಸಬಲೀಕರಣ' ಜೊತೆಗೆ "ವಿಕಸಿತ ಭಾರತಕ್ಕಾಗಿ ವಿಜ್ಞಾನ ಮತ್ತು ನಾವೀಣ್ಯತೆಯಲ್ಲಿ ಭಾರತೀಯ ಯುವ ಜನರ ಸಬಲೀಕರಣಕ್ಕಾಗಿ.. ಪಣ" ತೊಡುವ ನಿಮಿತ್ತ ಮತ್ತು ಭಾರತ ರತ್ನ, ನೋಬೆಲ್ ಪ್ರಶಸ್ತಿ ವಿಜೇತ ನಮ್ಮ ಮಹಾನ್ ಭೌತ ವಿಜ್ಞಾನಿ ಸಿ ವಿ ರಾಮನ್ ಅವರ ಕೊಡುಗೆಯನ್ನು ಸ್ಮರಿಸಲು ಈ ದಿನ ಆಚರಿಸಲಾಗುತ್ತದೆ.

ಈ ಸಂದರ್ಭದಲ್ಲಿ ಅಧೀಕ್ಷಕರಾದ ಎ.ಎ ಕಾಂಬಳೆ, ಎಸ್.ಎಸ್ ಸೀಮಿಮಠ, ಲತಾ ಎಮ್, ಆನಂದ, ಪ್ರಕಾಶ ಇಚಲಕರಂಜಿ, ಸುಮಿತ್ ಕಾವಳೆ, ಅಂಬೇಕರ್, ಎಚ್.ಎಸ್ ಬಿಲಕೇರಿ, ಸುನಿಲ್, ಸಂಗೀತಾ, ಪದ್ಮಪ್ರಿಯಾ, ಲಕ್ಮಿ,ಈರಣ್ಣ, ಮತ್ತಿತರು, ಓದುಗರು, ವಿಧ್ಯಾರ್ಥಿಗಳು, ಹಾಜರಿದ್ದು ವೈಜ್ಞಾನಿಕ ಮನೋಭಾವನೆ ಹಾಗೂ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿ ಕೊಳ್ಳುವ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

# ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ: ಅಧಿಕಾರಿಗಳಿಗೆ ಎಚ್ಚರಿಕೆ




ಚನ್ನಮ್ಮನ ಕಿತ್ತೂರು– ಸ್ಥಳೀಯ ತಾಪಂ ಆವರಣದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು (ಕೆಡಿಪಿ) ಸಭೆ ಜರುಗಿತು. ಅಧ್ಯಕ್ಷತೆ ಶಾಸಕ ಬಾಬಾಸೇಬ ಪಾಟೀಲ ವಹಿಸಿಕೊಂಡಿದ್ದರು.

ನಂತರ ಅವರು ಮಾತನಾಡಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಮಾಡುವ ಮೂಲಕ ಅಭಿವೃದ್ಧಿಗೆ ಆದ್ಯತೆ ನೀಡಿ ಮುಂಬರುವ ಬೇಸಿಗೆ ಸಮಯ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಕಟ್ಟೆಚ್ಚರಿಕೆ ನೀಡಿದರು.

ರೈತರ ಜಮೀನಿನ ಕೊಳವೆಬಾವಿಗೆ ವಿದ್ಯುತ್ತ ವ್ಯತ್ಯಯಾಗದಂತೆ ನೋಡಿಕೊಂಡು ಅವಶ್ಯವಿದ್ದಲ್ಲಿ ಟಿಸಿ ಅವಳವಡಿಸಿ ವಿದ್ಯುತ್ ಪೂರೈಕೆಯಾಗಬೇಕು. ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯ ವಿನಾ ಕಾರಣ ವಿದ್ಯು ತ್ತನ್ನು ಕಡಿತಗೊಳಿಸಬಾರದು ಸರ್ಕಾರ ನಿಗದಿಪಡಿಸಿದಂತೆ ರೈತರಿಗೆ ಪ್ರತಿದಿನ 7 ಗಂಟೆವರೆಗೆ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕು ಎಂದು ವಿದ್ಯುತ್ ಅಧಿಕಾರಿಗೆ ತಿಳಿಸಿದರು.

ಶಾಲಾ ಕಟ್ಟಡಗಳು ಅರ್ಧಕ್ಕೆ ನಿಂತಿದ್ದರೆ ಪೂರ್ಣ ಗೊಳಿಸಿ. ರಸ್ತೆ ಕಾಮಗಾರಿಗಳು ಪ್ರಾರಂಭವಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗದಂತೆ ಆದಷ್ಟೂ ಬೇಗನೇ ಮುಕ್ತಾಯಗೊಳಿಸಿ ಅನುಕೂಲ ಮಾಡಿಕೊಡಬೇಕೆಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗೆ ಆದೇಶಿಸಿದರು.

ಈ ವೇಳೆ ತಹಶೀಲ್ದಾರ ರವೀಂದ್ರ ಹಾದಿಮನಿ, ಆಡಳಿತ ಅಧಿಕಾರಿ ಹಾಗೂ ಜಿಲ್ಲಾ ಪಶು ಸಂಗೋಪನಾ ಇಲಾಖೆ ಅಧಿಕಾರಿ ಸಂಜೀವ ಕೂಲೇರ, ತಾಪಂ ಇಓ ಕಿರಣ ಗೋರ್ಪಡೆ, ತಾಲೂಕ ಮಟ್ಟದ ಎಲ್ಲ ಅಧಿಕಾರಿಗಳು ತಾಪಂ ಸಿಬ್ಬಂದಿ ಸೇರಿದಂತೆ ಸಾರ್ವಜನಿಕರಿದ್ದರು.

# ಆತ್ಮಜ್ಞಾನಕ್ಕಾಗಿ ಶಾಲಿ ಕಲಿಯಬೇಕಾಗಿಲ್ಲಾ:ಹಾದಿಮನಿ



ತಾಳಿಕೋಟೆ- ಮನುಷ್ಯನಾದವನಿಗೆ ಪ್ರಯತ್ನ ಅನ್ನುವದು ಬೇಕು ಮಹಾತ್ಮರ ಮಾತು ಕೇಳುವದಾಗಲಿ ಅವರ ಸಂಗವಿದ್ದರೇ ಮಾನವ ದಾರಿತಪ್ಪಿದ್ದನ್ನು ಗುರುತಿಸಿಕೊಳ್ಳಬಹುದಾಗಿದೆ ಇಲ್ಲದಿದ್ದರೆ ಪಶುಗಳಂತೆ ಬಾಳಬೇಕಾಗುತ್ತದೆ ಎಂದು ಮುದ್ದೇಬಿಹಾಳ ತಾಲೂಕಾ ಪಂಚಾಯತ್ ಮಾಜಿ ಅಧ್ಯಕ್ಷರಾದ ದೊಡ್ಡಪ್ಪಗೌಡ ಹಾದಿಮನಿ ಅವರು ನುಡಿದರು.

ಶನಿವಾರರಂದು ಸ್ಥಳೀಯ ಸಾಂಭಪ್ರಭು ಶರಣಮುತ್ಯಾರವರ ಮಹಾ ರಥೋತ್ಸವ ಕುರಿತು ಆಚರಿಸಿಕೊಂಡು ಬರಲಾಗುತ್ತಿರುವ ಶ್ರೀ ಪವಾಡ ಬಸವೇಶ್ವರರ ಮಹಾ ಪುರಾಣ ಪ್ರಾರಂಭೋತ್ಸವ ಕುರಿತು ಏರ್ಪಡಿಸಲಾದ ಧರ್ಮ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ಅನ್ಯರಿಗೆ ಮೋಸ ಮಾಡುವದು ಬೇಡಾ ಈ ಭೂಮಿ ಇರುವವರೆಗೂ ಮಹಾ ಶರಣರು ಹಾಗೂ ಶ್ರೀ ಖಾಸ್ಗತರು, ಶರಣಬಸವೇ ಶ್ವರರವರು ಪರಮಾತ್ಮನ ಸ್ವರೂಪಗಳಾಂತವರು ತೋರಿದಂತಹ ಮಾರ್ಗದಲ್ಲಿ ಬದುಕೋಣ ವೆಂದರು.

160 ವರ್ಷಗಳಿಂದ ಸರಗವಾಗಿ ಸಾಗಿ ಬಂದಂತಹ ಶ್ರೀ ಶರಣಮುತ್ಯಾರವರ ಜಾತ್ರೋತ್ಸವವು ದಿ. 19 ರಂದು ಜರುಗಲಿದೆ ಈ ಕುರಿತು ನಡೆದ ಪವಾಡ ಬಸವೇಶ್ವರರ ಪುರಾಣ ಅತೀವ ಮಹತ್ವದ್ದಾಗಿದೆ ಎಂದರು. ಹುಟ್ಟು ಆಕಸ್ಮೀಕವಾಗಿದೆ ಸಾವು ನಿಶ್ಚಿತವಾಗಿದೆ 84 ಸಾವಿರ ಜೀವರಾಸಿಗಳಲ್ಲಿ ಮನುಷ್ಯ ಜನ್ಮ ಶ್ರೇಷ್ಠವೆಂದು ಹೇಳಲಾಗುತ್ತಿದೆ ಸಂಸಾರಿಕರು ಮಹಾತ್ಮರಾದರೂ ನಾವು ಮಂಕರಾಗಿದ್ದೇವೆಂದರು.

ನಾವು ಮನುಷ್ಯರಾಗಬೇಕಾದರೆ ಅಂತರಂಗ ಶುದ್ದವಾಗಿರಬೇಕೆಂಬುದನ್ನು ಬಸವಣ್ಣನವರು ಹೇಳಿದ್ದಾರೆ ಕಲ್ಮಷ ಜೀವಿಗಳಿಗೆ ಮಹಾತ್ಮರು ನೋಡಿಯೇ ಇಲ್ಲಾ ಜೀವನದಲ್ಲಿ ಒಳ್ಳೆಯದೆಂಬುದನ್ನು ಶರಣರು ಮಹಾತ್ಮರನ್ನುವದು ಗೊತ್ತಿಲ್ಲಾ ದುರ್ಬುದ್ದಿಯ ಜೀವನ ನಡೆಸಲಾಗುತ್ತಿದೆ ಶತಕೋಟಿ ವರ್ಷದ ಪುಣ್ಯದ ಫಲವೇ ಮನುಷ್ಯ ಜನ್ಮ ಪಡೆಯಲು ಸಾದ್ಯವೆನ್ನಲಾಗುತ್ತಿದೆ ಎಂದು ಶರಣಮುತ್ಯಾರವರ ಹಾಗೂ ಶ್ರೀ ಖಾಸ್ಗತರ ಪವಾಡಗಳನ್ನು ವಿವರಿಸಿದ ಅವರು ಅನ್ಯಾಯ ಅಸತ್ಯ ವೆಸಗಿದವರಿಗೆ ಹಣದ ಮೋಸವಿದ್ದರೆ ಧರ್ಮವಂತರಾಗಲು ಸಾದ್ಯವಿಲ್ಲಾವೆಂದು ಹೇಳಿದ ಹಾದಿಮನಿ ಅವರು ಪರಮಾತ್ಮನ ಸ್ವರೂಪಗಳಾದ ಶರಣಬಸವೇಶ್ವರರ ಮಾರ್ಗದಲ್ಲಿ ಬದುಕೋಣ ಅವರ ವಿಚಾರ ಧಾರೆಯನ್ನು ಪಡೆದುಕೊಳ್ಳೋಣ ವೆಂದರು.

ಇನ್ನೋರ್ವ ಧರ್ಮಸಭೆಯನ್ನು ದೀಪಬೆಳಗಿಸುವದರೊಂದಿಗೆ ಉದ್ಘಾಟಿಸಿದ ಕೈಲಾಸಪೇಠೆಯ ವೇ.ಬಸವಪ್ರಭು ದೇವರು ಮಾತನಾಡಿ ಮಾನವರಾದ ನಾವು ಅನುಭವದ ವಿಚಾರಗಳನ್ನು ತಿಳಿದುಕೊಳ್ಳುವದು ಬಹಳವಿದೆ ಈ ಕುರಿತು ಬಹಳ ವರ್ಷಗಳಿಂದಲೂ ಪುರಾಣ ಹೇಳುತ್ತಾ ಸಾಗಿಬರಲಾಗಿದೆ 18 ಪುರಾಣ ಕೇಳಿದ್ದರಲ್ಲಿ ಪುರಾಣವೇ ಸಾಕೆನ್ನುವಂತಹ ವ್ಯಕ್ತಿಗಳಿಗೆ 19 ನೇ ಪುರಾಣ ಹೇಳಲು ಆಗಮಿಸಿದ ವ್ಯಕ್ತಿಯ ವಿಚಾರವೊಂದನ್ನು ಪ್ರಸ್ಥಾಪಿಸಿದ ಶ್ರೀಗಳು ಪತ್ರೋಳಿ ಮತ್ತು ಮಣ್ಣಿನ ಕಥೆಯೊಂದನ್ನು ಹೇಳಿದರಲ್ಲದೇ ಬುಲೆಟ್ ಟ್ರೇನಿನಲ್ಲಿ ಹೊರಟ ಶ್ರೀಮಂತ ವ್ಯಕ್ತಿಗಳು ಕುಳಿತಿದ್ದರ ಕುರಿತು ಅದೇ ಸ್ಥಾನದಲ್ಲಿ ವಿದೇಶಿ ಮಹಿಳೆಯು ಕುಳಿತ ತನ್ನ ಬ್ಯಾಗನ್ನು ಅದೇ ರೈಲ್ವೆ ಡೆಬ್ಬಿಯಲ್ಲಿ ಬಿಟ್ಟು ಇಳಿದು ಹೋಗಿದ್ದನ್ನು ಗುರುತಿಸಿಕೊಂಡ ಅಲ್ಲಿ ಕುಳಿತ ಶ್ರೀಮಂತ ವ್ಯಕ್ತಿಗಳು ಆ ಮಹಿಳೆ ಬಿಟ್ಟ ಬ್ಯಾಗು ನಂದು ನಿಂದು ಎಂದು ಹೇಳುತ್ತಾ ಸಾಗುವದರೊಂದಿಗೆ ಆ ಮಾತು ಪೋಲೀಸ್ ಸ್ಟೇಷನ್ ಮೆಟ್ಟಲು ಏರುತ್ತದೆ.

ನಂದು ಅನ್ನುವಂತಹ ವಿಚಾರಹೊಂದಿದ 4ಜನರು ಸಹ ಪೋಲೀಸ್ ಅಧಿಕಾರಿಗೆ ತಿಳಿಸಿದರೂ ಕೊನೇಗೆ ಆ ಬ್ಯಾಗಿನಲ್ಲಿ ಏನಿದೆ ಎಂದು ಕೇಳಿದಾಗ ಒಬ್ಬಬ್ಬರು ಇಲ್ಲ ಸಲ್ಲದ ಮಾತುಗಳನ್ನು ಹೇಳುತ್ತಾರೆ ಇದನ್ನು ಅರ್ಥೈಸಿಕೊಂಡ ಪೋಲೀಸ್ ಅಧಿಕಾರಿ ಆ ಬ್ಯಾಗನ್ನು ಬಿಚ್ಚಿ ನೋಡುವಷ್ಟರಲ್ಲಿ ಆ ಬ್ಯಾಗಿನಲ್ಲಿ ವ್ಯಕ್ತಿಯೋರ್ವನ ಕೊಲೆ ಮಾಡಿದ ತುಣಕುಗಳು ಕಂಡು ಬರುತ್ತವೆ ಇದನ್ನು ನೋಡಿದ ಆ ಬ್ಯಾಗು ನಂದು ಅನ್ನುವವರು ನಮ್ಮದಲ್ಲಾವೆಂದು ಬಾಯಿ ಸವರುತ್ತಾ ಮಾತನಾಡುತ್ತಾರೆಂಬ ಆಸೆ ಎಂಬುದು ದುರಾಸೆಯಾಗಿದ್ದರ ಕಥೆಯ ಸಾರಾಂಶವನ್ನು ವಿವರಿಸಿದ ಶ್ರೀಗಳು ಪುರಾಣದಿಂದ ಪುಣ್ಯಾತ್ಮರು ದೇಶವನ್ನು ಆಳಿದರು ಆಳಿದವರು ಬೇಕು ಬೇಡವೆಂಬುದನ್ನು ಅಳಿದಿರುವದೇ ಪುರಾಣ ಪುಣ್ಯಕಥೆಗಳಾಗಿವೆ ಎಂದರು.

ಇನ್ನೋರ್ವ ಪುರಾಣ ಪ್ರವಚನಕಾರರಾಗಿ ಆಗಮಿಸಿದ ಶರಣಸೋಮನಾಳದ ಶ್ರೀ ಮಹಾದೇವಯ್ಯ ಶಾಸ್ತ್ರೀಗಳು ಶ್ರೀ ಪವಾಡಬಸವೇಶ್ವರರ ಪುರಾಣಕ್ಕೆ ಚಾಲನೆ ನೀಡಿ ಪವಾಡ ಬಸವೇಶ್ವರರು ಅಪಾರ ಲೀಲೆಗಳನ್ನು ಮಾಡಿದವರಾಗಿದ್ದಾರೆ.

ಸಾಂಭಪ್ರಭುಗಳು ದೀಕ್ಷಾ ನೀಡಿದಂತಹ ವ್ಯಕ್ತಿಗಳು ಅತೀಯಾದ ಶ್ರೀಮಂತ ಬಧುಕಿನಲ್ಲಿ ತುಂಬಿ ತುಳಕುತ್ತಾ ಸಾಗಿದವರಾಗಿದ್ದಾರೆ ಅಂತಹ ಅನಂತ ಲೀಲೆಗಳನ್ನು ಶರಣರು ಮಾಡಿದವರಾಗಿದ್ದು ಅಂತಹ ಪವಾಡ ಬಸವೇಶ್ವರವರ ಕವಿಗಳು ಬರೆದಂತಹ ಪುರಾಣದ ನುಡಿಗಳನ್ನು ಓದಿ ಪುರಾಣಕ್ಕೆ ಚಾಲನೆ ನೀಡಿದ ಅವರು ಜೀವನದಲ್ಲಿ ಸ್ವಯಂ ಬುದ್ದಿ ಎಂಬುದು ಸತ್ಯತೆ ಯಿಂದ ಕೂಡಿರಲಿ ಎಂದು ಗುರುವಿನ ಆಶಿರ್ವಾದದಿಂದ ಸಾವೆನ್ನುವಂತಹದ್ದು.

ದೂರಾಗಿದ್ದರ ಕುರಿತು ಕಥೆಯನ್ನು ವಿವರಿಸಿದ ಅವರು ಗುರು ಚರಣದ ಮೇಲೆ ನಮಿಸಿದರೆ ಎಲ್ಲ ತೊಂದರೆಗಳು ದೂರಾಗಲಿವೆ ಕಾರಣ ಗುರುದ್ಯಾನವೆಂಬುದು ಅಗತ್ಯವಾಗಿದೆ ಸಾಂಭಪ್ರಭು ಶರಣರು ಬೇರಲ್ಲಾ ಶ್ರೀ ಖಾಸ್ಗತರು ಬೇರೆ ಅಲ್ಲಾ ಪವಾಡ ಬಸವೇಶ್ವರರು ಬೇರೆ ಅಲ್ಲಾವೆಂದು.

# ವಿಜಯಪುರ: 10 ಸಾವಿರ ಯುವಕರಿಗೆ ಉದ್ಯೋಗ: ಸಚಿವ ಎಂ.ಬಿ. ಪಾಟೀಲ



ವಿಜಯಪುರ- ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಕನಿಷ್ಠ 10 ಸಾವಿರ ಯುವಕರಿಗೆ ಉದ್ಯೋಗ ಒದಗಿಸಲು ಕಾರ್ಯೋನ್ಮುಖರಾಗಿರುವುದಾಗಿ ಕೈಗಾರಿಕೆ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಶನಿವಾರ ತಿಕೋಟಾ ತಾಲೂಕಿನ ಹೊನವಾಡ ಮತ್ತು ಘೋಣಸಗಿಯಲ್ಲಿ ನಾನಾ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮೊದಲಿಗೆ ಹೊನವಾಡದಲಿ ಕೆ.ಎನ್.ಎನ್.ಎಲ್ ವತಿಯಿಂದ ರೂ. 1 ಕೋ. ವೆಚ್ಚದಲ್ಲಿ ಹೊನವಾಡ- ಕನಮಡಿ ರಸ್ತೆ, ರೂ. 1.40 ಕೋ. ವೆಚ್ಚದಲ್ಲಿ ಹೊನವಾಡ- ಬಿಜ್ಜರಗಿ ಹಾಗೂ ಪಿ.ಆರ್.ಡಿಇಲಾಖೆಯ ವತಿಯಿಂದ ರೂ. 80 ಲಕ್ಷ ವೆಚ್ಚದಲ್ಲಿ ಹೊನವಾಡ-ಬಾಬಾನಗರ ರಸ್ತೆ ದುರಸ್ಥಿ ಕಾಮಗಾರಿಗೆ ಅವರು ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಬರದ ನಾಡಗಿದ್ದ ಹೊನವಾಡ ಭಾಗದಲ್ಲಿ ಜಲಸಂಪನ್ಮೂಲ ಸಚಿವನಾಗಿದ್ದಾಗ ರೂ. 3600 ಕೋ. ವೆಚ್ಚದಲ್ಲಿ ಕೈಗೊಂಡ ತುಬಚಿ- ಬಬಲೇಶ್ವರ ಏತ ನೀರಾವರಿ ಯೋಜನೆಯಿಂದಾಗಿ ಈ ಭಾಗದಲ್ಲಿ ರೈತರು ಕೋಟ್ಯಂತರ ರೂಪಾಯಿ ಕಬ್ಬು ಬೆಳೆದು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಕೆಲಸ ಮಾಡಿದವರ ಉಪಕಾರ ಸ್ಮರಿಸಿ ಕೈ ಬಲಪಡಿಸಿದರೆ ಮತ್ತಷ್ಟು ಅಭಿವೃದ್ಧಿ ಮಾಡಲು ಸ್ಪೂರ್ತಿ ಸಿಗುತ್ತದೆ. ಗ್ರಾಮದೇವತೆ ಬನಶಂಕರಿ ಆಶೀರ್ವಾದದಿಂದಾಗಿ ಇನ್ನೂ ಹೆಚ್ಚೆಚ್ಚು ಕೆಲಸ ಮಾಡಲು ಶಕ್ತಿ ಸಿಕ್ಕಿದೆ. ಗ್ರಾಮದಲ್ಲಿ 9 ಮತ್ತು 10ನೇ ತರಗತಿಗಳನ್ನು ಪ್ರಾರಂಭಿಸಲು ಸೂಚನೆ ನೀಡಿದ್ದೇನೆ. ಇಲ್ಲಿನ ಎಲ್ಲ ಶಾಲೆಗಳಿಗೆ ಸಿ.ಎಸ್.ಆರ್ ಅನುದಾನದಲ್ಲಿ ಕಾನ್ವೆಂಟ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ಅವರು ತಿಳಿಸಿದರು.

ಘೋಣಸಗಿ ಗ್ರಾಮದ ಅಮೋಘಸಿದ್ದೇಶ್ವರ ದೇವಸ್ಥಾನ ಹತ್ತಿರಕೆ.ಎನ್.ಎನ್.ಎಲ್ ವತಿಯಿಂದರೂ. 80 ಲಕ್ಷ ವೆಚ್ಚದಲ್ಲಿ ಅಳಗಿನಾಳ-ಗುಡ್ಡಾಪುರ ಗಡಿವರೆಗೆ ರಸ್ತೆ ಮತ್ತು ಸಿಡಿ ಕಾಮಗಾರಿಗಳಿಗೆ ಹಾಗೂ ರೂ.1.25 ಕೋಟಿ ವೆಚ್ಚದಲ್ಲಿಘೋಣಸಗಿ ಮುಖ್ಯರಸ್ತೆಯಿಂದ ಹುಬನೂರ ಮಹಾರಾಷ್ಟ್ರ ಗಡಿಯವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಸಚಿವರು ಮಾತನಾಡಿದರು.


ಜಲಸಂಪನ್ಮೂಲ ಸಚಿವನಾಗಿ ನೀರಾವರಿ ಕ್ರಾಂತಿ ಮಾಡಿದ್ದೇನೆ. ಈಗ ಕೈಗಾರಿಕೆ ಸಚಿವನಾಗಿ ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡಲಾಗುತ್ತಿದೆ. ಸುಮಾರು ರೂ. 1 ಲಕ್ಷ ಕೋ. ಬಂಡವಾಳ ಹೂಡಿಕೆಯಾಗಿ ಜಿಲ್ಲೆಯ ಸುಮಾರು 10 ಸಾವಿರ ಯುವಕರಿಗೆ ಉದ್ಯೋಗ ಒದಗಿಸಲು ಯೋಜನೆ ರೂಪಿಸಲಾಗಿದೆ. ಶೀಘ್ರದಲ್ಲಿಯೇ ಪಾಪಕಾನ್ಸ್ ಕಂಪನಿ ಜಿಲ್ಲೆಯಲ್ಲಿ ಉದ್ಯೋಗ ಮೇಳ ನಡೆಸಲಿದೆ ಎಂದು ಹೇಳಿದರು.

ಘೋಣಸಗಿ, ಕಳ್ಳಕವಟಗಿ, ಅಳಗಿನಾಳ ಗ್ರಾಮಗಳಿಗೆ ಯೋಜನಾಬದ್ಧವಾಗಿ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು. ಮುಂದಿನ ವರ್ಷದಿಂದ ಮೊದಲಿಗೆ ಟೇಲ್ಎಂಡ್ ನಿಂದ ಪ್ರಾರಂಭಿಸಿ ನಂತರ ಉಳಿದೆಡೆಗೆ ನೀರು ಹರಿಸಲಾಗುವುದು. ಉಳಿದ ಭಾಗಕ್ಕೂ ನೀರು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಘೋಣಸಗಿ ಗ್ರಾಮಕ್ಕೆ ಸಮರ್ಪಕ ವಿದ್ಯುತ್ ಪೂರೈಸಲು ರೂ. 12 ಕೋ. ವೆಚ್ಚದಲ್ಲಿ 110 ಕೆ.ವಿ. ವಿದ್ಯುತ್ ಸ್ಟೇಷನ್ ಮಂಜೂರ ಮಾಡಲಾಗಿದೆ. ಇದರಿಂದ ಮುಂಬರುವ ದಿನಗಳಲ್ಲಿ ಗುಣಮಟ್ಟದ ವಿದ್ಯುತ್ ಪೂರೈಕೆಯಾಗಲಿದೆ. ದೇವರು ನಮಗೆ ಕೊಟ್ಟಿದ್ದನ್ನು ನಿಮಗೆ ನೀಡಿದ್ದೇನೆ. ವಿಜಯಪುರ ಜಿಲ್ಲೆ ಮಹಾರಾಷ್ಟ್ರದ ಬಾರಾಮತಿಯಿಂದ ಸಮಗ್ರ ಅಭಿವೃದ್ಧಿಯಾಗಲು ಗುರಿ ಹೊಂದಿದ್ದೇನೆ ಎಂದು ಎಂ.ಬಿ. ಪಾಟೀಲ ತಿಳಿಸಿದರು.

ಜಿ.ಪಂ. ಮಾಜಿಅಧ್ಯಕ್ಷ ಸೋಮನಾಥ ಬಾಗಲಕೋಟ ಮಾತನಾಡಿ, ರಾಜ್ಯದ ಅಭಿವೃದ್ಧಿಗೆ ಕಾರ್ಯೋನ್ಮುಖರಾಗಿರುವ ಸಚಿವ ಎಂ.ಬಿ. ಪಾಟೀಲ ಅವರು, ಮತಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಮಾಡುತ್ತ ಜನಮನ ಗೆದ್ದಿದ್ದಾರೆ. ನೀರಾವರಿ ಮೂಲಕ ಜನರ ಬಾಳನ್ನು ಹಸನಾಗಿಸಿದ್ದಾರೆ. ಅವರ ಕೆಲಸ ಕಾರ್ಯಗಳನ್ನು ನಾವು ಮರೆಯಬಾರದು ಎಂದು ಹೇಳಿದರು.

ಮುಖಂಡ ಯಾಕೂಬ್ ಜತ್ತಿ ಮಾತನಾಡಿ, ತೋಟಗಾರಿಕೆ ಬೆಳೆ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದ ನಮಗೆ ಸಚಿವ ಎಂ.ಬಿ. ಪಾಟೀಲ ಅವರು ಕೈಗೊಂಡ ನೀರಾವರಿ ಯೋಜನೆಗಳಿಂದಾಗಿ ನೀರಿನ ಬವಣೆ ತಪ್ಪಿದೆ. ರೈತರು ಗುಳೆ ಹೋಗುವುದು ನಿಂತಿದೆ. ಜಮೀನಿಗೆ ನೀರು ಬಂದಿದ್ದು.

# ಕೂಲ್ ಡ್ರಿಂಕ್ಸ್ ಬದಲಿಗೆ ರಾಗಿ ಅಂಬಲಿ ಸೇವಿಸಿದರೆ ಆರೋಗ್ಯಕ್ಕೆ ಭರ್ಜರಿ ಪ್ರಯೋಜನ: ಸಿದ್ಧಪಡಿಸೋದು ತುಂಬಾ ಸರಳ!



ರಾಜ್ಯದಲ್ಲಿ ದಿನದಿಂದ ದಿನಕ್ಕೆ ಬಿಸಿಲು ಹೆಚ್ಚಾಗುತ್ತಿದೆ. ಈ ಕಾರಣದಿಂದಾಗಿ ದೇಹವನ್ನು ತಂಪಾಗಿಸಲು ಅನೇಕ ಜನರು ಕಾರ್ಬೋನೇಟೆಡ್ ಕೂಲ್ ಡ್ರಿಂಕ್ಸ್ ಕುಡಿಯುತ್ತಾರೆ. ಆದರೆ, ಈ ತಂಪು ಪಾನೀಯಗಳು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ತಜ್ಞರು ಎಚ್ಚರಿಕೆ ನೀಡುತ್ತಾರೆ. ಹೀಗಾಗಿ ನಾವು ನಿಮಗಾಗಿ ಆರೋಗ್ಯಕರ ಪಾನೀಯವನ್ನು ತಂದಿದ್ದೇವೆ.

ಈ ತಂಪು ಪಾನೀಯ ಸೇವಿಸುವುದರಿಂದ ದೇಹದ ಉಷ್ಣಾಂಶದಲ್ಲಿ ಸಮತೋಲನ ಸಾಧಿಸುವ ಜೊತೆಗೆ ತ್ವರಿತ ಶಕ್ತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಈ ಆರೋಗ್ಯಕರ ಪಾನೀಯವನ್ನು ಮನೆಯಲ್ಲಿಯೇ ಸುಲಭವಾಗಿ ಸಿದ್ಧಪಡಿಸಬಹುದು. ಅದುವೇ.. ಅಜ್ಜಿಯ ಕಾಲದ ಸಾಂಪ್ರದಾಯಿಕ ಪಾನೀಯ ರಾಗಿ ಅಂಬಲಿ. ಇದೀಗ ರಾಗಿ ಅಂಬಲಿ ತಯಾರಿಕೆಗೆ ಬೇಕಾಗುವಂತಹ ಪದಾರ್ಥಗಳೇನು? ತಯಾರಿಸುವುದು ಹೇಗೆ ಎಂಬುದನ್ನು ನೋಡೋಣ.

**ರಾಗಿ ಅಂಬಲಿ ಸಿದ್ಧಪಡಿಸಲು ಬೇಕಾಗುವ ಸಾಮಗ್ರಿಗಳೇನು?:**

ರಾಗಿ ಹಿಟ್ಟು – 2 ಟೀಸ್ಪೂನ್

ಬಾಂಬೆ ರವಾ – 2 ಟೀಸ್ಪೂನ್

ಉಪ್ಪು – ರುಚಿಗೆ ಬೇಕಾಗುವಷ್ಟು

ಮೊಸರು – 1/4 ರಿಂದ 1/2 ಕಪ್

**ರಾಗಿ ಅಂಬಲಿ ತಯಾರಿಸುವ ವಿಧಾನ ಹೇಗೆ?:**

ಮೊದಲು ರಾಗಿ ಹಿಟ್ಟನ್ನು ಸಣ್ಣ ಮಿಕ್ಸಿಂಗ್ ಬೌಲ್‌ನಲ್ಲಿ ತೆಗೆದುಕೊಳ್ಳಿ. ಬಳಿಕ ಅರ್ಧ ಕಪ್ ನೀರನ್ನು ಅದರೊಳಗೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕಾಗುತ್ತದೆ. ನಾವು ಅದನ್ನು ತಯಾರಿಸುವ ಮೊದಲು ಅದನ್ನು ಹಿಂದಿನ ದಿನ ಸಂಜೆ ಅಥವಾ ರಾತ್ರಿಯಲ್ಲಿ ಹಿಟ್ಟನ್ನು ಹುದುಗಿಸಬೇಕು.

ಅಂದರೆ, ಈ ಹಿಟ್ಟನ್ನು ಕನಿಷ್ಠ 8 ರಿಂದ 10 ಗಂಟೆಗಳ ಕಾಲ ಹುದುಗಿಸಿದರೆ ಉತ್ತಮ ಎಂದು ತಜ್ಞರು ತಿಳಿಸುತ್ತಾರೆ. ಹಿಟ್ಟನ್ನು ಹುದುಗಿಸಿದಷ್ಟೂ ಅಂಬಲಿ ತುಂಬಾ ರುಚಿಯಾಗಿರುತ್ತದೆ ಎಂಬುದನ್ನು ನೆನಪಿನಲ್ಲಿ ಇಡಬೇಕು. ಅಲ್ಲದೆ, ಈ ನೆನೆಸುವಿಕೆಯಿಂದಲೂ ಹೆಚ್ಚಿನ ಪೋಷಕಾಂಶಗಳನ್ನು ಲಭಿಸುತ್ತದೆ.

10 ಗಂಟೆಗಳ ಕಾಲ ನೆನೆಸಿದ ನಂತರ ಮುಚ್ಚಳವನ್ನು ತೆಗೆದು ಹಿಟ್ಟನ್ನು ನೋಡಿದರೆ ಮೇಲೆ ನೀರು ತೇಲುವುದು ಹಾಗೂ ಕೆಳಗೆ ಹಿಟ್ಟು ಸಂಗ್ರಹವಾಗುವುದು ಕಂಡುಬರುತ್ತದೆ.

ಇದಾನಂತರ ಇನ್ನೊಂದು ಪಾತ್ರೆಯಲ್ಲಿ ನೀರನ್ನು ಸೋಸಿಕೊಳ್ಳಿ. ರಾಗಿ ಹಿಟ್ಟು ನೆನೆಸಲು ಬಳಸಿದ ನೀರನ್ನು ಬಿಸಾಡದೆ ಮರುದಿನವೂ ಅಂಬಲಿ ಬೇಯಿಸಲು ಇದೇ ನೀರನ್ನು ಬಳಸಬೇಕು. ಇದು ಹೆಚ್ಚು ರುಚಿ ಹಾಗೂ ಪೋಷಕಾಂಶಗಳಿಂದ ಕೂಡಿರುತ್ತದೆ.

ಈಗ ಒಲೆಯ ಮೇಲೆ ಪಾತ್ರೆ ಇಟ್ಟು 2 ರಿಂದ 3 ಕಪ್ ನೀರು (ಸುಮಾರು 650 ಮಿಲಿ) ಸುರಿಯಿರಿ ಹಾಗೂ ಒಲೆಯನ್ನು ಕಡಿಮೆ ಉರಿಯಲ್ಲಿ ಇರಿಸಿ ಸರಿಯಾಗಿ ಕುದಿಸಬೇಕಾಗುತ್ತದೆ. ನೀರು ಸ್ವಲ್ಪ ಬಿಸಿಯಾದ ನಂತರ ಅದರಲ್ಲಿ ನೆನೆಸಿದ ರಾಗಿ ಹಿಟ್ಟು ಹಾಗೂ ಮೊದಲು ಸೋಸಿದ ನೀರನ್ನು ಮತ್ತೆ ಮಿಶ್ರಣ ಮಾಡಬೇಕು.

ನೀರಿಗೆ ಹಿಟ್ಟನ್ನು ಸೇರಿಸಿದ ನಂತರ, ಒಂದು ಚಮಚದಿಂದ ಚೆನ್ನಾಗಿ ಮಿಶ್ರಣ ಮಾಡಿ. ಇಲ್ಲದಿದ್ದರೆ, ಹಿಟ್ಟು ಗಂಟಾಗುತ್ತದೆ ಎಂದು ನೀವು ನೆನಪಿಟ್ಟುಕೊಳ್ಳಬೇಕು.

ಬಳಿಕ ಬಾಂಬೆ ರವಾ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕಾಗುತ್ತದೆ 4 ರಿಂದ 5 ನಿಮಿಷ ಬೇಯಿಸಬೇಕಾಗುತ್ತದೆ.

ಬಳಿಕ ಬೇಕಾದಷ್ಟು ಉಪ್ಪು ಹಾಕಿ ಮತ್ತೆ 5 ನಿಮಿಷ ಬೇಯಿಸಿದರೆ ಸಾಕು ರಾಗಿ ಅಂಬಲಿ ಅಥವಾ ಗಂಜಿ ರೆಡಿಯಾಗುತ್ತದೆ. ಬಳಿಕ ಒಲೆ ಆಫ್ ಮಾಡಿ ಮತ್ತು ಸ್ವಲ್ಪ ತಣ್ಣಗಾಗಲು ಬಿಡಿ.

ಇದಕ್ಕೂ ಮೊದಲು ಒಂದು ಚಿಕ್ಕ ಬಟ್ಟಲಿನಲ್ಲಿ ಮೊಸರನ್ನು ತೆಗೆದುಕೊಂಡು ಅರ್ಧ ಕಪ್ ನೀರು ಸೇರಿಸಿ ದಪ್ಪ ಮಜ್ಜಿಗೆ ರೆಡಿ ಮಾಡಿ.

ಈಗ ಸ್ವಲ್ಪ ತಣ್ಣಗಾದ ರಾಗಿ ಅಂಬಲಿಗೆ ಮಜ್ಜಿಗೆ ಸೇರಿಸಿ ಮತ್ತು ಎಲ್ಲವನ್ನೂ ಒಟ್ಟಿಗೆ ಮಿಶ್ರಣ ಮಾಡಿ. ಈ ಹಂತದಲ್ಲಿ ಉಪ್ಪು ಸಾಕಾಗದಿದ್ದರೆ ಮತ್ತಷ್ಟು ಸೇರಿಸಿ ಮತ್ತು ಚೆನ್ನಾಗಿ ಮಿಶ್ರಣ ಮಾಡಬೇಕಾಗುತ್ತದೆ.

ಬಳಿಕ ಅದನ್ನು ಗ್ಲಾಸ್‌ನಲ್ಲಿ ತೆಗೆದುಕೊಂಡು ಸ್ವಲ್ಪ ತೆಳ್ಳಗೆ ಕತ್ತರಿಸಿದ ಈರುಳ್ಳಿ, ಹಸಿರು ಮೆಣಸು ಮತ್ತು ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ. ಇದೀಗ ಅಷ್ಟೇ ಟೇಸ್ಟಿ ಹಾಗೂ ಆರೋಗ್ಯಕರವಾದ ರಾಗಿ ಅಂಬಲಿ ಸವಿಯಲು ಸಿದ್ಧವಾಗಿದೆ.

ಹುಳಿಬೇಕೆಂದರೆ ಸ್ವಲ್ಪ ನಿಂಬೆರಸ ಹಿಂಡಿ ಸೇವಿಸಬಹುದು.

**ರಾಗಿ ಅಂಬಲಿಯ ಹಲವು ಪ್ರಯೋಜನಗಳು:** ರಾಗಿಯಲ್ಲಿ ಫೈಬರ್, ಕಬ್ಬಿಣ, ಪ್ರೋಟೀನ್, ಕ್ಯಾಲ್ಸಿಯಂ ಹಾಗೂ ಅಮೈನೋ ಆಮ್ಲಗಳು ಹೇರಳವಾಗಿವೆ. ರಾಗಿಯಿಂದ ತಯಾರಿಸಿದ ಪಾನೀಯವು ಉತ್ತಮ ಆರೋಗ್ಯಕ್ಕೆ ಪೂರಕವಾಗಿದೆ.

ರಾಗಿಯು ಗ್ಲುಟನ್ ಮುಕ್ತವಾಗಿದ್ದು, ರಾಗಿ ಅಂಬಲಿ ಅಂಟು ಅಸಹಿಷ್ಣುತೆ ಇಲ್ಲವೇ ಉದರದ ಕಾಯಿಲೆ ಇರುವ ವ್ಯಕ್ತಿಗಳಿಗೆ ಉಪಯುಕ್ತವಾಗಿದೆ.

ರಾಗಿಯು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಹೆಚ್ಚು ಸಹಾಯ ಮಾಡುತ್ತದೆ. ಮಧುಮೇಹ ಇಲ್ಲವೇ ಇನ್ಸುಲಿನ್ ಪ್ರತಿರೋಧವನ್ನು ನಿರ್ವಹಿಸುವ ವ್ಯಕ್ತಿಗಳಿಗೆ ರಾಗಿ ಅಂಬಲಿ ಸೇವಿಸಿದರೆ ಹೆಚ್ಚು ಲಾಭ ದೊರೆಯುತ್ತದೆ.

ರಾಗಿ ಅಂಬಲಿ ಸೇವಿಸುವುದರಿಂದ ಹಸಿವು ಹತೋಟಿಗೆ ಬರುತ್ತದೆ. ಪದೇ ಪದೇ ಹಸಿವಿನಿಂದ ಬಳಲುವ ಸಮಸ್ಯೆಯು ಕಡಿಮೆ ಆಗುತ್ತದೆ. ಕಡಿಮೆ ಕ್ಯಾಲೋರಿಗಳನ್ನು ಹೊಂದಿರುವುದರಿಂದ ತೂಕ ನಷ್ಟಕ್ಕೆ ತುಂಬಾ ಒಳ್ಳೆಯದು.

ಜೊತೆಗೆ ರಾಗಿ ಅಂಬಲಿಯಲ್ಲಿನ ಹೆಚ್ಚಿನ ಪ್ರಮಾಣದ ನಾರಿನಂಶವು ಜೀರ್ಣಾಂಗ ವ್ಯವಸ್ಥೆ ಸುಧಾರಿಸುತ್ತದೆ.

ರಾಗಿಯಲ್ಲಿ ಒಳ್ಳೆಯ ಪ್ರಮಾಣದ ಕಾರ್ಬೋಹೈಡ್ರೇಟ್‌ಗಳಿದ್ದು, ಇದು ದಿನವಿಡೀ ದೇಹಕ್ಕೆ ಶಕ್ತಿ ಕೊಡುತ್ತದೆ. ವಿಶೇಷವಾಗಿ ಮಕ್ಕಳಿಗೆ, ಕ್ರೀಡಾಪಟುಗಳಿಗೆ ತುಂಬಾ ಪ್ರಯೋಜನಕಾರಿ.

ರಾಗಿಯಲ್ಲಿ ಪೊಟ್ಯಾಸಿಯಮ್ ಇರುವುದರಿಂದ ಅಧಿಕ ಬಿಪಿಯನ್ನು ನಿಯಂತ್ರಿಸಲು ಸಹಾಯವಾಗುತ್ತದೆ.

ರಾಗಿಯಲ್ಲಿ ಉತ್ಕರ್ಷಣ ನಿರೋಧಕಗಳು ಇದ್ದು, ಚರ್ಮ ಹಾಗೂ ಕೂದಲಿನ ಆರೋಗ್ಯ ಸುಧಾರಿಸುತ್ತದೆ.

ದೇಹವನ್ನು ತಂಪಾಗಿಸುತ್ತದೆ, ವಿಶೇಷವಾಗಿ ಬೇಸಿಗೆಯಲ್ಲಿ ಉತ್ತಮ ಪಾನೀಯವಾಗಿದೆ.

ರಾಗಿಯಲ್ಲಿ ಕ್ಯಾಲ್ಸಿಯಂ ಹೆಚ್ಚಿದ್ದು ಮೂಳೆ ಹಾಗೂ ಹಲ್ಲುಗಳನ್ನು ಸದೃಢವಾಗಿಸುತ್ತದೆ.



## ಹೋಳಿ ಶಾಂತತಾ ಸಭೆ | 14 ರಿಂದ 16ವರೆಗೆ ಮೂರು ದಿನ ಹೋಳಿ ಸಂಭ್ರಮ

# ಶಾಂತಿ, ಸಂಭ್ರಮದಿಂದ ಹೋಳಿ ಹಬ್ಬ ಆಚರಿಸಿ: ಡಿಸಿ ಜಾನಕಿ



ಬಾಗಲಕೋಟೆ– ಪ್ರತಿವರ್ಷದಂತೆ ಈ ವರ್ಷವೂ ಜಿಲ್ಲೆಯಲ್ಲಿ ಮಾರ್ಚ 14 ರಿಂದ 16 ವರೆಗೆ ನಡೆಯಲಿರುವ ಹೋಳಿ ಸಂಭ್ರಮದ ಗತವೈಭವ ಮರುಕಳುಹಿಸುವ ನಿಟ್ಟಿನಲ್ಲಿ ಶಾಂತಿ ಹಾಗೂ ಸಂಭ್ರದಿಂದ ಆಚರಿಸುವಂತೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಹೋಳಿ ಹಬ್ಬದ ಕುರಿತು ಜರುಗಿದ ಶಾಂತತಾ ಸಭೆಯ ಅದ್ಯಕ್ಷತೆ ವಹಿಸಿ ಮಾತನಾಡಿದ ಅವರು ಹಬ್ಬಗಳು ಇರುವುದು ಸಂಭ್ರಮ ಆಚರಣೆಗಾಗಿ. ಆದ್ದರಿಂದ ದೇಶದಲ್ಲಿಯೇ 2ನೇ ಸ್ಥಾನ ಪಡೆದಿರುವ ಬಾಗಲಕೋಟೆ ಹಬ್ಬ ಶಿಸ್ತಿನಿಂದ ಅಚ್ಚುಕಟ್ಟಾಗಿ ನಡೆಬೇಕಿದೆ. ನಗರದ ಅನೇಕ ಹೋಳಿ ಹಬ್ಬ ಸಂಘಟನೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸ್ವತಃ ಸ್ವಯಂ ಸೇವಕರಾಗಿ ಕೆಲಸ ಮಾಡಿ ಶಾಂತಿ ಕಾಪಾಡುವ ಜೊತೆಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ಜೊತೆ ಸಹಕರಿಸಬೇಕು ಎಂದರು.

ಅದೇಷ್ಟೋ ಸಂಭ್ರಮದಿಂದ ಹಬ್ಬ ಆಚರಿಸಿದರೂ ಖುಷಿ ಪಡೆಯದೇ ಸಣ್ಣದೊಂದು ಘಟನೆಯನ್ನು ದೊಡ್ಡದನ್ನಾಗಿ ಬಿಂಬಿಸುವ ಕಾರ್ಯವಾಗಬಾರದು. ಸಂತೋಷದಿಂದ ಪರಸ್ಪರ ಸೌಹಾರ್ದತೆಯಿಂದ ಹೋಳಿ ಹಬ್ಬ ಆಚರಿಸುವಂತೆ ಹೋಳಿ ಸಮಿತಿಗೆ ಕರೆ ನೀಡಿದರಲ್ಲದೇ ಈ ಸಮಯದಲ್ಲಿ ಪಿಯುಸಿ ಪರೀಕ್ಷೆಗಳು ನಡೆಯುತ್ತಿರುವುದರಿಂದ ಪರೀಕ್ಷಾರ್ಥಿಗಳಿಗೆ ತೊಂದರೆಯಾಗದಂತೆ ಹೋಳಿ ಸಮಿತಿಯರು ನಿಗಾವಹಿಸಬೇಕು. ಆಚರಣೆಯಲ್ಲಿ ಸಮಸ್ಯೆ ಉಂಟಾದಲ್ಲಿ ನೇರವಾಗಿ ಪೊಲೀಸ್ ಇಲಾಖೆ ಸಂಪರ್ಕಿಸಬೇಕು. ಹೋಳಿ ಆಚರಣೆ ಬಿಡುಗಡೆಯಾದ ಅನುದಾನ ಮರಳಿ ತರಲು ಕ್ರಮವಹಿಸುವುದಾಗಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಮಾತನಾಡಿ ಹಬ್ಬಗಳೆಂದರೆ ಸಂಭ್ರಮಿಸುವುದು ಸಹಜ. ಆದರೆ ಸಂಭ್ರಮಾಚರಣೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗೆ ಅವಕಾಶ ಕೊಡಬಾರದು. ಹಬ್ಬದ ಆಚರಣೆಗೆ ಪೊಲೀಸ್ ಇಲಾಖೆ ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದೆ. ಹಲಗೆ ಮೇಳ ಸ್ಪರ್ಧೆಗಳು ನಡೆಯುವ ಸ್ಥಳಗಳ ಮಾಹಿತಿ ನೀಡಿದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಿಕೊಡಲಾಗುವುದು. ಹಬ್ಬದ ಬಂದೋಬಸ್ತಗಾಗಿ ಹೊರಗಡೆಯಿಂದ ಬಂದ ಪೊಲೀಸ್ ಸಿಬ್ಬಂದಿಗಳಿಗೆ ಸ್ಥಳೀಯ ನಾಯಕರು, ಸಂಘಟಿಕರ ಪರಿಚಯವಿರುವದಿಲ್ಲ. ಅಂತಹ ಸಿಬ್ಬಂದಿಗಳೊಂದಿಗೆ ಸಹಕರಿಸಿಕೊಂಡು ಹಬ್ಬದ ಯಶಸ್ವಿಗೆ ಸಹಕರಿಸಲು ತಿಳಿಸಿದರು.

ಹೋಳಿ ಸಮಿತಿಯ ಪ್ರತಿನಿಧಿ ಮಹಾಬಳೇಶ ಗುಡಗುಂಟಿ ಮಾತನಾಡಿ ಮಾರ್ಚ 12 ರಿಂದ ಹೋಳಿ ಹಬ್ಬ ಪ್ರಾರಂಭಗೊಳ್ಳುತ್ತಿದ್ದು, ಮಾರ್ಚ 13 ರಂದು ಕಾಮದಹನವಾಗುತ್ತದೆ. ಮಾರ್ಚ 14 ರಿಂದ 16 ವರೆಗೆ ಮೂರು ದಿನಗಳ ಕಾಲ ಬಣ್ಣದೋಕುಳಿ ಜರುಗಲಿದೆ. 14 ರಂದು ಕಿಲ್ಲಾ, ನವನಗರ ಹಾಗೂ ವಿದ್ಯಾಗಿರಿ, 15 ರಂದು ಹಳಪೇಟೆ, ಜೈನ ಪೇಟೆ ಹಾಗೂ ವೆಂಕಟಪೇಟೆ, 16 ರಂದು ಹೊಸಪೇಟೆ ಓಣಿಯಲ್ಲಿ ಬಣ್ಣದೋಕುಳಿ ನಡೆಯಲಿದೆ ಎಂದರು.

ಇದರ ಜೊತೆಗೆ ಸೋಗಿನ ಬಂಡಿ ಮೆರವಣಿಗೆ ಕೂಡಾ ಜರುಗಲಿದ್ದು, 13 ಕಿಲ್ಲಾ, 14 ಹಳಪೇಟೆ, 15 ಹೊಸಪೇಟಿ, 16 ಜೈನ ಪೇಟೆ, 17 ವೆಂಕಟಪೇಟೆ ಹಾಗೂ ವಿದ್ಯಾಗಿರಿಯಲ್ಲಿ ನಡೆಯಲಿದೆ. ನಗರದ ಬಸವೇಶ್ವರ ವೃತ್ತದ ಬಳಿ ಇರುವ ಹೊಳೆ ಆಂಜನೇಯ ದೇವಸ್ಥಾನದ ಆವರಣ ಹಾಗೂ ಕಿಲ್ಲಾ ಅಂಬಾಭವಾನಿ ದೇವಸ್ಥಾನದ ಬಳಿ ರೇನ್‌ಡ್ಯಾನ್ಸ್ ನಡೆಯಲಿದೆ. ಈ ಹಿಂದೆ ಹೋಳಿ ಆಚರಣೆಗೆ ಜಿಲ್ಲೆಗೆ ನೀಡಲಾದ 10 ಲಕ್ಷ ರೂ.ಗಳ ಅನುದಾನ ಮರಳಿ ಪಡೆಯುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಎ.ಎ.ದಂಡಿಯಾ ಮತ್ತು ಟಂಕಸಾಲಿ ಮಾತನಾಡಿ ರಂಜಾನ ತಿಂಗಳು ಆರಂಬಗೊಂಡು ಇದೇ ಸಮಯದಲ್ಲಿ ಹೋಳಿ ಹಬ್ಬ ಬಂದಿರುವದರಿಂದ ಎರಡು ಹಬ್ಬಗಳನ್ನು ಸಂಭ್ರಮದಿಂದ ಆಚರಿಸಲಾಗುವುದೆಂದು ತಿಳಿಸಿದರು. ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ಮಾಂತೇಶ ಜಿದ್ದಿ, ಡಿವಾಯ್‌ಎಸ್‌ಪಿ ಬಿರಾದಾರ, ನವನಗರ ಸಿಪಿಐ ಗುರುನಾಥ ಚವ್ಹಾಣ ಸೇರಿದಂತೆ ಹೋಳಿ ಸಮಿತಿಯ ಪ್ರತಿನಿಧಿಗಳಾದ ಕಳಕಪ್ಪ ಬಾದವಾಡಗಿ, ಅಶೋಕ ಲಿಂಬಾವಳಿ, ಸಂಚು ವಾಡಕರ, ನಾಗರಾಜ ಹದ್ಲಿ, ಶ್ರಣವ ಖಾತೇದಾರ, ಬಸವರಾಜ ಧರ್ಮಂತಿ, ಶಿವುಕುಮಾರ ನಂದಿಕೋಳಮಠ, ವಿವೇಕಾನಂದ ಗರಸಂಗಿ ಉಪಸ್ಥಿತರಿದ್ದರು.

# ಉತ್ತಮ ಶಿಕ್ಷಣ ಪಡೆದು ಗುರಿ ಸಾಧಿಸಿಕೊಳ್ಳಿ: ಬಿ.ಎಸ್. ಸಿಂಧೂರ



ತುಬಚಿ– ವಿದ್ಯಾರ್ಥಿಗಳು ತಮ್ಮ ಗುರಿ ಸಾಧನೆಗಾಗಿ ಉತ್ತಮ ಶಿಕ್ಷಣ ಪಡೆಯಬೇಕು ಎಂದು ರೈತ ಮುಖಂಡ ಬಿ. ಎಸ್. ಸಿಂಧೂರ ಹೇಳಿದರು.

ಗ್ರಾಮದ ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆ ದಳವಾಯಿ ವಸತಿ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ 5ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಗುರಿಯೆಡೆಗೆ ಸಾಗಲು ಪಾಲಕರು ಸಹಕರಿಸಬೇಕು. ಈ ಶಾಲೆಯ ಅಭಿವೃದ್ಧಿಗೆ ನನ್ನ ಸಹಾಯ ಹಸ್ತ ಯಾವಾಗಲೂ ಇರುತ್ತದೆ ಎಂದರು.

ಸುರೇಶಗೌಡ ಪಾಟೀಲ ಮಾತನಾಡಿ, ಗ್ರಾಮೀಣ ಭಾಗದ ಶಾಲೆಗಳಲ್ಲಿ ಶಿಕ್ಷಣ ಪಡೆದ ಅನೇಕರು ಇಂದು ದೇಶದ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿಗಳು ಮೊಬೈಲ್ ಹಾಗೂ ರಾಜಕೀಯ ವ್ಯಾಮೋಹಕ್ಕೆ ಒಳಗಾಗದೆ ಶಿಕ್ಷಕರು ತೋರಿದ ಮಾರ್ಗದಲ್ಲಿ ಹೆಚ್ಚಿನ ಅಂಕ ಪಡೆದು ಶಾಲೆಯ ಹಾಗೂ ಪಾಲಕರ ಕೀರ್ತಿ ಹೆಚ್ಚಿಸಬೇಕು ಎಂದರು.

ಎಸ್.ಎಂ. ಕುಂಬಾರ ಮಾತನಾಡಿ, ಶಿಕ್ಷಕರು ಮಕ್ಕಳ ಶೈಕ್ಷಣಿಕ ಪ್ರಗತಿಯ ಆಧಾರವಾಗಿಟ್ಟುಕೊಂಡು ವಿದ್ಯಾಭ್ಯಾಸದಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಗತಿ ತೆಗೆದುಕೊಳ್ಳಬೇಕು ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ದಳವಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪಂಚಾಕ್ಷರಿ ಮಠದ, ಶಿವಣಪ್ಪ ದಳವಾಯಿ, ಶ್ರೀಶೈಲ ಮಠದ, ಬಸಪ್ಪ ದಳವಾಯಿ, ಮಲ್ಲಪ್ಪ ಬಾಲಪ್ಪನವರ, ಶಿವಲಿಂಗಪ್ಪ ಕುಂಬಾರ, ಶಿವಲಿಂಗಪ್ಪ ಕಿತ್ತೂರ, ಮುತ್ತಪ್ಪ ಕುಂಬಾರ, ಬಸವರಾಜ ಪಾಟೀಲ, ಡಾ.ಸದಾಶಿವ ಬಾಲಪ್ಪನವರ, ಹನುಮಂತ ಕುಂಬಾರ, ನಿಂಗಪ್ಪ ಬೋರಾಳ, ಅಣ್ಣಪ್ಪ ಕರಬಸನವರ, ಮಲ್ಲಪ್ಪ ಬೋರಾಳ, ಸದಾಶಿವ ಕರಬಸನವರ, ಅಪ್ಪಸಾಬ ಕುರಿ, ಪರಶುರಾಮ ಸಿಂಗೆ, ದರೆಪ್ಪ ಕುಂಬಾರ ಮತ್ತಿತರರಿದ್ದರು.

# ಜನ ಮನ ಸೆಳೆದ ಸಮೂಹ ಗಾಯನ



ಗುಳೇದಗುಡ್ಡ– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾಡಳಿತ ವಿಜಯನಗರ ಹಂಪಿ ಉತ್ಸವ 2025 ಸಾಸುವೆ ಕಾಳು ಗಣಪ ವೇದಿಕೆಯಲ್ಲಿ ನಗರದ ವೈಷ್ಣವಿ ಗೂಳಿ ಹಾಗೂ ಸಂಗೀತ ಶಿಕ್ಷಕ ಬಸವರಾಜ ಸಿಂದಗಿಮಠ ತಂಡದವರಿಂದ ಸಮೂಹ ಗಾಯನ ಕಾರ್ಯಕ್ರಮ ನಡೆಯಿತು.

ಚಂದ್ರಶೇಖರ್ ಆಲೂರು ಕೀಬೋರ್ಡ್, ಜಗನ್ನಾಥ್ ಕೆಂದೂಳಿ ತಬಲಾ, ಶಿವು ಪತ್ತಾರ ಕೊಳಲು ಸಾಥ್ ನೀಡಿದರು. ಶ್ರಾವಣ ಬಂತು ಶ್ರಾವಣ, ಹಾಗೂ ನಾನಾರಿಗಲ್ಲದವಳು ಹಾಡುಗಳು ಕೇಳುಗರನ್ನು ಮಂತ್ರಮುಗ್ಧರನ್ನಾಗಿಸಿದರು.

# ಬಾಗಲಕೋಟೆ: ರೈತರಿಗೆ ಖಾರವಾದ ಒಣ ಮೆಣಸಿನಕಾಯಿ

## ಬೆಲೆ ಕುಸಿತದಿಂದಾಗಿ ಮೆಣಸಿನಕಾಯಿ ರೈತರಿಗೆ ತಳಮಳ



ಬಾಗಲಕೋಟೆ– ಈ ವರ್ಷ ಮಳೆ ಚೆನ್ನಾಗಿಯೇ ಆಗಿತ್ತು. ಮೆಣಸಿನಕಾಯಿ ಬೆಳೆಯೂ ಚೆನ್ನಾಗಿ ಬಂದಿತ್ತು. ಆದರೆ, ಬೆಲೆ ಇಲ್ಲದ್ದರಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಜೋಳ, ಕಡಲೆ, ಗೋಧಿ ಬೆಳೆದುಕೊಡಿದ್ದ ರೈತರು ಕಳೆದ ಕೆಲ ವರ್ಷಗಳಿಂದ ಬ್ಯಾಡಗಿ ಹಾಗೂ ಗುಂಟೂರು ಮೆಣಸಿನಕಾಯಿ ಬೆಳೆಯುತ್ತಿದ್ದಾರೆ. ಬೆಲೆ ಕುಸಿತದಿಂದಾಗಿ ಮೆಣಸಿನಕಾಯಿ ರೈತರ ಪಾಲಿಗೆ ಖಾರವಾಗಿ ತಳಮಳ ಹೆಚ್ಚಿಸಿದೆ.

ಕೆಲ ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಮೆಣಸಿನಕಾಯಿಯನ್ನು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಈಗ 12 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.

ಕಳೆದ ವರ್ಷ ಗುಂಟೂರು ಮೆಣಸಿನಕಾಯಿ ಪ್ರತಿ ಕ್ವಿಂಟಲ್‌ಗೆ 15 ಸಾವಿರಕ್ಕೂ ಹೆಚ್ಚಿತ್ತು. ಈ ಬಾರಿ 9 ರಿಂದ 13 ಸಾವಿರ ಸಿಗುತ್ತಿದೆ. ಬ್ಯಾಡಗಿ ಮೆಣಸಿನಕಾಯಿ ಕಳೆದ ವರ್ಷ ಪ್ರತಿ ಕ್ವಿಂಟಲ್‌ಗೆ 30 ಸಾವಿರದಿಂದ 35 ಸಾವಿರವರೆಗೆ ಮಾರಾಟವಾಗಿತ್ತು. ಈ ಬಾರಿ 18 ರಿಂದ 25 ಸಾವಿರವರೆಗೆ ಮಾರಾಟವಾಗುತ್ತಿದೆ.

ಕಳೆದ ವರ್ಷ ಬೆಲೆ ಸಿಗಲಿಲ್ಲ ಎಂದು ಕೋಲ್ಡ್ ಸ್ಟೋರೇಜ್ ಗಳಲ್ಲಿ ಸ್ಟಾಕ್ ಮಾಡಿಡಲಾಗಿತ್ತು. ಅದೂ ಸೇರಿ ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೆಣಸಿನಕಾಯಿ ಆವಕವಾಗಿದೆ. ನಿರೀಕ್ಷಿತ ಬೆಲೆ ಸಿಗುತ್ತಿಲ್ಲ ಎಂದು ಸೂಳಿಭಾವಿಯ ಹುನಗುಂದ ತೋಟಗಾರಿಕಾ ರೈತ ಉತ್ಪಾದಕ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ರವಿ ಸಜ್ಜನರ ತಿಳಿಸಿದರು.

ಬ್ಯಾಡಗಿ ಹಾಗೂ ಗುಂಟೂರು ಮೆಣಸಿನಕಾಯಿಗಳೆರಡನ್ನೂ ಬೆಳೆದಿದ್ದೇವೆ.

ಪ್ರತಿ ಎಕರೆಗೆ ಬ್ಯಾಡಗಿ ಮೆಣಸಿನಕಾಯಿ ಮೂರು ಕ್ವಿಂಟಲ್ ಇಳುವರಿ ಬರುತ್ತದೆ. ಗುಂಟೂರು 7 ರಿಂದ 9 ಕ್ವಿಂಟಲ್‌ನಷ್ಟು ಬರುತ್ತದೆ. ಆದರೆ, ಮಾರುಕಟ್ಟೆಯಲ್ಲಿ ಬೆಲೆ ಕಡಿಮೆ ಇದೆ ಎಂದು ರೈತ ವಿರೂಪಾಕ್ಷಪ್ಪ ಹೇಳಿದರು.

ಎರಡು ವರ್ಷದ ಹಿಂದೆ ಉತ್ತಮ ಬೆಲೆ ದೊರೆತಿತ್ತು. ಇದರಿಂದ ಮೆಣಸಿನಕಾಯಿ ಬೆಳೆಯಲು ಆರಂಭಿಸಿದ್ದೆವು. ಎರಡು ವರ್ಷಗಳಿಂದ ಉತ್ತಮ ಬೆಲೆ ಸಿಗದಿರುವುದರಿಂದ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದು ರೈತರು ಅಳಲು ತೋಡಿಕೊಂಡರು.

**ಬಾಗಲಕೋಟೆಯಲ್ಲಿಲ್ಲ ಮಾರುಕಟ್ಟೆ** ಜಿಲ್ಲೆಯಲ್ಲಿ 12 ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಗುಂಟೂರು ಹಾಗೂ ಬ್ಯಾಡಗಿ ಮೆಣಸಿನಕಾಯಿ ಬೆಳೆಯಲಾಗುತ್ತಿದೆ.

ಆದರೆ ಜಿಲ್ಲೆಯಲ್ಲಿ ಮಾರುಕಟ್ಟೆ ಇಲ್ಲ. ಬಾಗಲಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕಳೆದ ವರ್ಷ ಒಣ ಮೆಣಸಿನಕಾಯಿ ಖರೀದಿಗೆ ವ್ಯವಸ್ಥೆ ಮಾಡಲಾಗಿತ್ತು.

ಆದರೆ ಅದಕ್ಕೆ ಉತ್ತಮ ಪ್ರತಿಕ್ರಿಯೆ ರೈತರು ಹಾಗೂ ವ್ಯಾಪಾರಸ್ಥರಿಂದ ದೊರೆಯದ್ದರಿಂದ ಖರೀದಿ ನಡೆಯಲಿಲ್ಲ.

ಜಿಲ್ಲೆಯಲ್ಲಿ ಮೆಣಸಿನಕಾಯಿ ಖರೀದಿಗೆ ಮಾರುಕಟ್ಟೆಯಿಲ್ಲ. ಹುಬ್ಬಳ್ಳಿ ಅಥವಾ ಬ್ಯಾಡಗಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗಬೇಕು. ಅದಕ್ಕೆ ಸಾರಿಗೆ ಖರ್ಚು ಹೆಚ್ಚುವರಿಯಾಗುತ್ತಿದೆ.

## 7 ವರ್ಷದ ಪುಟ್ಟ ರೋಜೆದಾರ




**ಬಾಗಲಕೋಟ–ನಗರದ ಫತ್ತೇಶಾ ಮೊಹಲ್ಲಾ ನಿವಾಸಿಯಾದ ಮುದಸ್ಸರ್ ಎ.ಶಾಲಗಾರ ಅವರ 7 ವರ್ಷದ ಪುತ್ರ ಮಹಮ್ಮದ ಝಿಯಾನ್ ಎಂ.ಶಾಲಗಾರ ಅವರು ಪವಿತ್ರ ರಮಜಾನ ಮಾಸದ ಪ್ರಥಮ ರೋಜಾ 13 ಗಂಟೆ ನಿರಂತರ ನೀರು, ಅನ್ನಾಹಾರ ಇಲ್ಲದೇ ರೋಜಾ ವೃತ (ಉಪವಾಸ)ವನ್ನು ಆಚರಿಸಿದನು.**

**ಏಳು ವರ್ಷದ ಮಹ್ಮದಝಿಯಾನ್ ರೋಜಾ ಮಾಡುವ ಮೂಲಕ ಕಿರಿಯ ರೋಜೆದಾರ ಭಗವಂತನ ಕೃಪಾಶಿರ್ವಾದಕ್ಕೆ ಪಾತ್ರನಾಗಿದ್ದಾನೆ.**

# ಕಲುಷಿತಗೊಳ್ಳುತ್ತಿರುವ ಕೃಷ್ಣಾ, ಮಲಪ್ರಭಾ ನದಿಗಳು

## ಕೃಷ್ಣಾ, ಮಲಪ್ರಭಾ, ಘಟಪ್ರಭಾ ನದಿಗಳಿಗೆ ಕಂಟಕ; ಅಧಿಕಾರಿಗಳ ನಿರ್ಲಕ್ಷ್ಯ



ಬಾಗಲಕೋಟೆ– ಕೃಷ್ಣಾ, ಮಲಪ್ರಭಾ, ಘಟಪ್ರಭಾ ನದಿಗಳು ಈ ಭಾಗದ ಜನರ ಜೀವನಾಡಿಯಾಗಿವೆ. ಆದರೆ, ಅದೇ ಜನರು ಅವುಗಳನ್ನು ಕಲುಷಿತಗೊಳಿಸುತ್ತಿದ್ದಾರೆ. ಅದನ್ನು ತಡೆಯಬೇಕಾಗಿದ್ದ ಅಧಿಕಾರಿಗಳು ಕಂಡೂ ಕಾಣದಂತಿದ್ದಾರೆ.

ಕೊಳಚೆ ನೀರು, ಕಾರ್ಖಾನೆಗಳ ತ್ಯಾಜ್ಯ, ಕಟ್ಟಡಗಳ ತ್ಯಾಜ್ಯ, ರಾಶಿ, ರಾಶಿ ಭಕ್ತರ ಬಟ್ಟೆಗಳು ನದಿ ನೀರನ್ನು ಕಲುಷಿತಗೊಳಿಸುತ್ತವೆ. ಅದೇ ನೀರನ್ನು ನದಿ ತೀರದ ನೂರಾರು ನಗರ, ಪಟ್ಟಣ, ಗ್ರಾಮಗಳ ಕುಡಿಯುವ ನೀರಿನ ಮೂಲವಾಗಿದೆ.

ಇಳಕಲ್, ಹುನಗುಂದ, ಬಾದಾಮಿ ಸೇರಿದಂತೆ ಹಲವು ಪಟ್ಟಣ, ಗ್ರಾಮಗಳಿಗೆ ಕುಡಿಯುವ ನೀರನ್ನು ಎರಡೂ ನದಿಗಳಿಂದ ಸರಬರಾಜು ಮಾಡಲಾಗುತ್ತಿದೆ. ನದಿಯಿಂದ ಶುದ್ಧೀಕರಿಸಿದ ನೀರನ್ನು ಸರಬರಾಜು ಮಾಡಲಾಗುತ್ತಿದೆಯಾದರೂ, ಜನರು ಕುಡಿಯಲು ನೀರನ್ನು ಈ ನೀರನ್ನು ಬಳಸುತ್ತಿಲ್ಲ. ಪರಿಣಾಮ ಬಾಗಲಕೋಟೆ ಸೇರಿದಂತೆ ವಿವಿಧೆಡೆ ಶುದ್ಧ ಕುಡಿಯುವ ನೀರಿನ ಘಟಕಗಳು ತಲೆ ಎತ್ತಿವೆ.

ಜಲಜೀವನ್ ಮಿಷನ್‌ನಡಿ ಕುಡಿಯುವ ನೀರಿನ ಯೋಜನೆಗೆ ಬಹಳಷ್ಟು ಕಡೆ ಕೃಷ್ಣಾ ಹಾಗೂ ಮಲಪ್ರಭಾ ನೀರನ್ನು ಬಳಸಿಕೊಳ್ಳಲು ಯೋಜಿಸಲಾಗಿದೆ. ಹಲವಾರು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಪ್ರಗತಿಯಲ್ಲಿವೆ. ಆದರೆ, ನೀರು ಕಲುಷಿತಗೊಳ್ಳದಂತೆ ಕ್ರಮಕೈಗೊಳ್ಳುವಲ್ಲಿ, ಜನರಲ್ಲಿ ಜಾಗೃತಿ ಮೂಡಿಸುವ ಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ.

**ಬಟ್ಟೆಯದ್ದೇ ಬಹುದೊಡ್ಡ ಸಮಸ್ಯೆ** ಕೂಡಲಸಂಗಮ: ಕೃಷ್ಣಾ, ಮಲಪ್ರಭಾ ನದಿಯ ಸಂಗಮವಾದ ಕೂಡಲಸಂಗಮಕ್ಕೆ ನಿತ್ಯ ಸಾವಿರಾರು ಭಕ್ತರು ಬರುವರು. ಬಹುತೇಕರು ಪುಣ್ಯಸ್ನಾನ ಮಾಡುತ್ತಾರೆ. ಕೆಲವು ಭಕ್ತರು ಬಟ್ಟೆಗಳನ್ನು ನದಿಯಲ್ಲಿಯೇ ಬಿಟ್ಟು ಹೋಗುವುದರಿಂದ ನದಿ ದಿನದಿಂದ ದಿನಕ್ಕೆ ಕಲುಷಿತಗೊಳ್ಳುತ್ತಿದೆ. ಸ್ವಚ್ಚತೆ ಕಾರ್ಯವನ್ನು ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಹೊರಗುತ್ತಿಗೆ ಕಾರ್ಮಿಕರು ನಿತ್ಯ ಮಾಡಿದರೂ ತಡೆಯುವ ಕಾರ್ಯ ಆಗುತ್ತಿಲ್ಲ.

ಬಾದಾಮಿ ಬನಶಂಕರಿ, ಸವದತ್ತಿಯ ಯಲ್ಲಮನಗುಡ್ಡದ ಜಾತ್ರೆ ಮುಗಿದ ಒಂದು ವಾರ ಕೃಷ್ಣಾ, ಮಲಪ್ರಭಾ ನದಿಯ ತೀರ ಭಂಡಾರದಿಂದ ತುಂಬಿ ಹೋಗುತ್ತದೆ. ಹುಣ್ಣಿಮೆ, ಅಮವಾಸ್ಯೆ ಬಂದರೆ ನದಿಯ ದಡ ಕಾಲಿಡದಂತೆ ಬಟ್ಟೆಗಳ ರಾಶಿಯೇ ಬಿದ್ದಿರುತ್ತದೆ.

ಶಬರಿಮಲೆ ಅಯ್ಯಪ್ಪ, ಆಂಜನಾದ್ರಿ ಬೆಟ್ಟ, ಸಂಗಮನಾಥ ಮಾಲಾಧಾರಿಗಳು ಇಲ್ಲಿಗೆ ಬಂದು, ಪುಣ್ಯಸ್ನಾನ ಮಾಡಿ ತಾವು ಉಟ್ಟ ಬಟೆಗಳನ್ನು ನದಿಗೆ ಬಿಡುವುದರಿಂದ ನದಿಯು ಕಲುಷಿತವಾಗುತ್ತಿದೆ. ಕೆಲವು ಭಕ್ತರು ಮನೆಯಲ್ಲಿ ಪೂಜೆ ಮಾಡಿದ ವಸ್ತುಗಳನ್ನು ನದಿಗೆ ಎಸೆಯುವರು, ಇನ್ನೂ ಕೆಲವರು ಭಗ್ನಮೂರ್ತಿಗಳನ್ನು ನದಿಗೆ ಎಸೆದ ಪರಿಣಾಮ ನದಿ ಮಲಿನವಾಗುತ್ತಿದೆ.

ದರ್ಶನಕ್ಕೆ ಬಂದ ಕೆಲವು ಭಕ್ತರು ದೇವಾಲಯ ಆವರಣದ ಪೌಳಿಗಳಲ್ಲಿ ಕುಳಿತು ಊಟ ಮಾಡಿ, ಊಟದ ಪ್ಲಾಸ್ಟಿಕ್ ತಟ್ಟೆಗಳನ್ನು ನದಿಗೆ ಎಸೆಯುವರು. ಇನ್ನೂ ಕೆಲವರು ಕೃಷ್ಣಾ, ಮಲಪ್ರಭಾ ನದಿ ದಡದಲ್ಲಿಯೇ ಮಲಮೂತ್ರ ವಿಸರ್ಜನೆ ಮಾಡುವರು. ರಥ ಬೀದಿ ಬಳಿಯ ಕೃಷ್ಣಾ ನದಿಯ ದಡ ಮಲಮೂತ್ರ ವಿಸರ್ಜನೆಯ ತಾಣವಾಗಿದೆ. ಪ್ಲಾಸ್ಟಿಕ್ ಬಾಟಲಗಳು ನದಿಯ ದಡದಲ್ಲಿ ಬಿದ್ದಿವೆ. ಕೆಲವು ಕಡೆ ನದಿಯ ದಡ ಗಬ್ಬು ನಾರುವುದು.

ಪುಣ್ಯಸ್ನಾನ ಮಾಡಿದ ಭಕ್ತರು ನದಿಯಲ್ಲಿ ಬಟ್ಟೆ ಬಿಡಬಾರದು, ಯಾರೂ ತ್ಯಾಜ್ಯವಸ್ತುಗಳನ್ನು ನದಿಗೆ ಎಸೆಯಬಾರದು ಎಂಬ ನಾಮಫಲಕವನ್ನು ಮಂಡಳಿ ನದಿಯ ದಡದಲ್ಲಿ ಅಳವಡಿಸಿದರೂ ಪ್ರಯೋಜನವಾಗಿಲ್ಲ.

ದೇವಾಲಯ ಹೊರ ಆವರಣದಲ್ಲಿ ಎರಡು ಶೌಚಗೃಹಗಳು ಇದ್ದು, ತ್ಯಾಜ್ಯ ವಿಲೇವಾರಿ ಮಾಡಲು ಮಂಡಳಿ 20 ವರ್ಷಗಳ ಹಿಂದೆ ಎರಡು ಕಿ.ಮೀ ದೂರದಲ್ಲಿ ವಿಲೇವಾರಿ ಘಟಕ ಮಾಡಿತ್ತು.

# ವಕ್ಫ್ ಕಮಿಟಿ ನವೀಕರಣಕ್ಕೆ ಲಂಚ ಆಡಿಟರ್ ಸೇರಿ ಇಬ್ಬರು ಲೋಕಾಯುಕ್ತ ಬಲೆಗೆ

ವಿಜಯಪುರ– ವಕ್ಫ್ ಕಮಿಟಿಯೊಂದರ ನವೀಕರಣ ಮಾಡಲು ಒಂದೂವರೆ ಲಕ್ಷ ರೂ. ಲಂಚದ ಪಡೆಯುತ್ತಿದ್ದಾಗ ವಕ್ಫ್ ಬೋರ್ಡ್ ಆಡಿಟರ್ ಹಾಗೂ ಆತನ ಸಹೋದರನನ್ನು ಲೋಕಾಯುಕ್ತ ಅಧಿಕಾರಿಗಳು ರೆಡ್ ಹ್ಯಾಂಡ್ ಆಗಿ ಹಿಡಿದಿದ್ದಾರೆ.

ವಕ್ಫ್ ಬೋರ್ಡ್ ನ ಆಡಿಟರ್ ಮಹಮ್ಮದ್ ಮೊಸಿನ್ ಜಮಖಂಡಿ ಮತ್ತು ಈತನ ಸಹೋದರ ಮುಜಾಹಿದ್ ಜಮಖಂಡಿ ಎಂಬುವವರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಅಂಜುಮನ್ ಇಸ್ಲಾಂ ಕಮಿಟಿಯ ನವೀಕರಣಕ್ಕಾಗಿ ಒಂದೂವರೆ ಲಕ್ಷ ರೂ.ಲಂಚಕ್ಕೆ ಬೇಡಿಕೆ ಇಡಲಾಗಿತ್ತು. ಈ ಬಗ್ಗೆ ದೂರು ಆಧರಿಸಿ, ಅಧಿಕಾರಿಗಳು ಕಾರ್ಯಾಚರಣೆ ಮಾಡಿದ್ದಾರೆ.

ಜಿಲ್ಲಾಸ್ಪತ್ರೆ ಆವರಣದಲ್ಲಿ ಹಣ ಪಡೆದುಕೊಳ್ಳುವಾಗ ಎಸ್ ಪಿ ಟಿ.ಮಲ್ಲೇಶ್, ಪೊಲೀಸ್ ಇನ್ಸ್‌ಪೆಕ್ಟರ್ ಗಳಾದ ಆನಂದ್ ಟಕ್ಕಣ್ಣವರ್ ಮತ್ತು ಆನಂದ್ ದೋಣಿ ಹಾಗೂ ಸಿಬ್ಬಂದಿ ದಾಳಿ ಮಾಡಿ ಆರೋಪಿಗಳನ್ನು ಬಲೆಗೆ ಕೆಡವಿದ್ದಾರೆ.

ಲೋಕಾಯುಕ್ತ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

"SATYASHRAYA" Kannada daily Editor, Printer, Publisher & Owned by ANAND SHARANABASAVARAJ. JIGAJINNI, Jigajinni Printing Press Janata Bazar Compound, Bagalkot-587101. Printed at Jigajinni Printing Press Janata Bazaar Compound, Bagalkot-587101. Dist : Bagalkot, Karanataka State.